ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 09-10-2025ರ ಗುರುವಾರ, ಪೂರ್ವಾಹ್ನ 11-30 ಗಂಟೆಗೆ ನಡೆದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡಾವಳಿ.

<u>ಉಪಸ್ಥಿತರು:</u>

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು - ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್.ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
3. ಪ್ರೊ. ಎಸ್.ಜೆ. ಮಂಜುನಾಥ್ - ಸದಸ್ಯರು
4. ಡಾ. ಟಿ.ಆರ್. ಚಂದ್ರಶೇಖರ್ - ಸದಸ್ಯರು
5. ಶ್ರೀ ಕೆ. ಗೋಕುಲ್ ಗೋವರ್ಧನ್ - ಸದಸ್ಯರು
6. ಡಾ. ಮಹೇಶ್ ಟಿ.ಬಿ. - ಸದಸ್ಯರು
7. ಡಾ. ಬಿ.ಆರ್. ಜಯಕುಮಾರಿ - ಸದಸ್ಯರು
8. ಡಾ. ಹೆಚ್.ಎಂ. ಮಹೇಶ - ಸದಸ್ಯರು
9. ಶ್ರೀ ಮಹದೇಶು - ಸದಸ್ಯರು
10. ಶ್ರೀ ನಾಗರಾಜು ಸಿ. - ಸದಸ್ಯರು
11. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ - ಸದಸ್ಯರು
12. ಡಾ. ಶಿಲ್ಪ ಜೆ. - ಸದಸ್ಯರು
13. ಡಾ. ನಟರಾಜು ಹೆಚ್.ಎಸ್. - ಸದಸ್ಯರು
14. ಶ್ರೀ ಎನ್. ಶಂಕರ - ಸದಸ್ಯರು
15. ಡಾ. ಎಂ. ಪುಷ್ಪವತಿ - ಸದಸ್ಯರು
16. ಡಾ. ಎನ್. ನಾಗರಾಜ, ಕುಲಸಚಿವರು (ಪರೀಕ್ಷಾಂಗ) - ಸದಸ್ಯರು
17. ಶ್ರೀಮತಿ ರೇಖಾ ಕೆ.ಎಸ್., ಹಣಕಾಸು ಅಧಿಕಾರಿಗಳು - ವಿಶೇಷ ಆಹ್ವಾನಿತರು
18. ಶ್ರೀಮತಿ ಸವಿತಾ ಎಂ.ಕೆ. ಕುಲಸಚಿವರು - ಸದಸ್ಯ ಕಾರ್ಯದರ್ಶಿ

<u>ಅನುಪಸ್ಥಿತರು</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀ ಶೇಖರ್, ಜಂಟಿ ನಿರ್ದೇಶಕರು, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಖ್ಯಾತ ಸಾಹಿತಿಗಳಾದ ಪದ್ಮವಿಭೂಷಣ ಹಾಗೂ ಪದ್ಮಶ್ರೀ ಪುರಸ್ಕೃತರಾದ ಡಾ. ಎಸ್ ಎಲ್ ಭೈರಪ್ಪ ಇವರು ದಿನಾಂಕ 24-09-2025ರಂದು ನಿಧನರಾದರಿಂದ ಎರಡು ನಿಮಿಷ ಮೌನಚರಿಸಲಾಯಿತು.

ಡಾ. ಮಹೇಶ್ ಟಿ.ಬಿ. ಇವರು ಮಾತನಾಡಿ, ಮೈಸೂರು ದಸರಾ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಬಯಲು ರಂಗಮಂದಿರದಲ್ಲಿ ಜರುಗಿದ ರಾಷ್ಟ್ರಕವಿ ಕುವೆಂಪುರವರು ರಚಿಸಿರುವ ನಾಡಗೀತೆಯ ನೂರರ ಸಂಭ್ರಮದಲ್ಲಿ ಸುಮಾರು 15000 ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಉಪಸ್ಥಿತರಿದ್ದು, ಸದರಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ

ಯಶಸ್ವಿಯಾಗಿ ನಿರ್ವಹಿಸಿದ ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ಕಾರಣಕರ್ತರಾದ ಎಲ್ಲಾ ಸಿಬ್ಬಂದಿಗಳಿಗೆ ಎಲ್ಲಾ ಸಿಂಡಿಕೇಟ್ ಸದಸ್ಯರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕಾರ್ಯಕ್ರಮ ಅಚ್ಚುಕಟ್ಟಾಗಿ ನಿರ್ವಹಿಸಲು ಸಹಕರಿಸಿದವರಿಗೆ ಸಲ್ಲಬೇಕೆಂದು ಮುಖ್ಯವಾಗಿ ವಿದ್ಯಾರ್ಥಿಗಳ ಮನವೊಲಿಸಿ ಕರೆತಂದ ಕಾಲೇಜಿನ ಪ್ರಾಂಶುಪಾಲರು, ಕುಲಸಚಿವರು, ಸಿಂಡಿಕೇಟ್ ಸದಸ್ಯರು, ವಿದ್ಯಾವಿಷಯಕ ಪರಿಷತ್ ಸದಸ್ಯರ ಸಹಕಾರದಿಂದ ಅರ್ಥಪೂರ್ಣವಾಗಿ ಜರುಗಿತು ಹಾಗೂ ಸಂವಿಧಾನ ಪೀಠಿಕೆಯನ್ನು ಓದಲು ಅವಕಾಶ ಮಾಡಿಕೊಟ್ಟಿರುವುದು ಸಂತಸ ತಂದಿದೆ ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸುಮಾರು ಹದಿನೈದು ಸಾವಿರ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಕುವೆಂಪುರವರು ರಚಿಸಿರುವ ನಾಡಗೀತೆ ನೂರರ ಸಂಭ್ರಮದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟಿರುವುದಕ್ಕೆ ಕುಲಸಚಿವರಿಗೆ ಧನ್ಯವಾದಗಳನ್ನು ಅರ್ಪಿಸಿದರು ಹಾಗೂ ವಿಶ್ವವಿದ್ಯಾನಿಲಯಕ್ಕೆ ಸೇರಿದ ಆಸ್ತಿ ನೋಂದಣಿಗೆ ಸಂಬಂಧಿಸಿದಂತೆ ಹಿಂದಿನ ಕುಲಸಚಿವರಲ್ಲಿ ಮನವಿ ಮಾಡಿಕೊಂಡಿದ್ದೆ. ಪ್ರಸ್ತುತ ಕುಲಸಚಿವರು ಆಸ್ತಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಜಂಟಿ ಕಾರ್ಯಚರಣೆ ನಡೆಸಿ ದಿನಾಂಕ: 8.10.2025ರಂದು ಅನಧಿಕೃತ ಒತ್ತುವರಿ ತೆರವು ಮಾಡಿ, ಗುತ್ತಿಗೆ ಕರಾರು ನೋಂದಣಿ ಕ್ರಮವಹಿಸಿರುವುದು ಶ್ಲಾಘನೀಯ. ಹಾಗೂ ವಿಶ್ವವಿದ್ಯಾನಿಲಯದ ವಶಕ್ಕೆ ಪಡೆದಿರುವುದಕ್ಕೆ ಸಿಂಡಿಕೇಟ್ ಸದಸ್ಯರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಕುಲಸಚಿವರು ಮಾತನಾಡಿ, ಪಡುವಾರಹಳ್ಳಿ ವೃತ್ತದಿಂದ ಬೋಗಾದಿ ವೃತ್ತದವರೆಗೆ ರಸ್ತೆಯ ಎಡಭಾಗದಲ್ಲಿರುವ ಎಲ್ಲಾ ಆಸ್ತಿಗಳ ಪ್ರಾಪರ್ಟಿ ಕಾರ್ಡ್‌ಗಳನ್ನು ಒದಗಿಸುವಂತೆ ಡಿಡಿಎಲ್‌ಆರ್ ಮೈಸೂರುರವರಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ಸಭೆಯ ಸದಸ್ಯರುಗಳಿಗೆ ತಿಳಿದಿರುವ ಹಾಗೆ ಉನ್ನತ ಶಿಕ್ಷಣ ಪರಿಷತ್ತು ಹಾಗೂ British Council ರವರ ಸಹಭಾಗಿತ್ವದಲ್ಲಿ Leadership Development Programme for Vice-Chancellor's and Nodal Officers of Internationalization Cells of the respective State Public Universities with selected UK Universitiesಗಳೊಂದಿಗೆ ದಿನಾಂಕ: 13-09-2025 ರಿಂದ 25-09-2025ರವರೆಗೆ ನಡೆದಿರುತ್ತದೆ. ಐದು ವಿಶ್ವವಿದ್ಯಾನಿಲಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿದರು. ಕ್ರೀಡಾ ಚಟುವಟಿಕೆಗಳಿಗಾಗಿ ಹೆಚ್ಚಿನ ಜಾಗವನ್ನು ಮೀಸಲಿರಿಸಿರುತ್ತಾರೆ. ನಂತರ Liverpool ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದೇವು ಅಲ್ಲಿ ಎಂಬಿಎ. ವ್ಯಾಸಂಗ ಮಾಡುತ್ತಿರುವ 130 ವಿದ್ಯಾರ್ಥಿಗಳ ಪೈಕಿ 70 ವಿದ್ಯಾರ್ಥಿಗಳು ಕರ್ನಾಟಕದವರು ಅದರಲ್ಲಿ 13 ವಿದ್ಯಾರ್ಥಿಗಳು ಮೈಸೂರಿನವರಾಗಿರುತ್ತಾರೆಂದು ತಿಳಿಸಿದರು. ನಂತರ Cardiff ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದು, ಸದರಿಯವರು ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಒಡಂಬಡಿಕೆ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ನಂತರ Swansea ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದೆವು ಅಲ್ಲಿ ಹೆಚ್ಚಿನ ಅಧ್ಯಾಪಕರು ಏಷ್ಯಾದವರೇ ಆಗಿರುವುದು ಕಂಡುಬಂತು. ಹೀಗೆ ಲಂಡನ್‌ನ ಏಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿರುತ್ತೇವೆ ಇಲ್ಲಿನ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಗಮನಿಸುವುದೇನೆಂದರೆ ವಿಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿರುವುದು ಕಂಡು ಬಂದಿತು. ಒಟ್ಟಾರೆ ಲಂಡನ್‌ನ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಅಲ್ಲಿನ ಅಭಿವೃದ್ಧಿಯ ಅಂಶಗಳನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸುವುದರ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರು ಲಂಡನ್‌ನ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಲು ಕ್ರಮವಹಿಸುವುದಾಗಿ ತಿಳಿಸಿದರು. ಲಂಡನ್‌ನ ಹಲವು ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡುವ ಕಾರ್ಯ ಮೊಟಕುಗೊಳಿಸಿ ಹೆಚ್ಚು ಕಾಲ ಇರದೇ ತಾವು ಕೂಡಲೇ ಮೈಸೂರಿಗೆ ಬಂದು ಕುವೆಂಪುರವರ ನಾಡಗೀತೆ ನೂರರ ಸಂಭ್ರಮದ

ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತೋಷವನ್ನುಂಟು ಮಾಡಿದೆ ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಮೈಸೂರು ಮಹಾನಗರ ಪಾಲಿಕೆಯ ಸಹಾಯಕ ಆಯುಕ್ತರಾದ ಶ್ರೀ ಸೋಮಶೇಖರ್‌ರವರ ಸಹಾಯವನ್ನು ನೆನೆಯಬೇಕಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ **ಕುಲಪತಿಯವರ** ಅನುಮತಿಯ ಮೇರೆಗೆ, ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| **ದಿನಾಂಕ: 20-08-2025ರಂದು ಜರುಗಿದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.** | |

- ಶ್ರೀ ಕೆ.ಗೋಕುಲ್ **ಗೋವರ್ಧನ್‌**ರವರು ಮಾತನಾಡಿ, ಸಾಮಾನ್ಯ ವಿಷಯ ಸಭೆ **2025/5.13.**
ಇಂಡಸ್ ಟವರ್ **ಪ್ರೈ. ಲಿಮಿಟೆಡ್** ಇವರಿಗೆ ಮಾನಸಗಂಗೋತ್ರಿ ಹಾಗೂ ಯುವರಾಜ ಕಾಲೇಜು ಆವರಣದಲ್ಲಿ ಮೊಬೈಲ್ ಟವರ್ **ಅಳವಡಿಸಲು** ಖಾಲಿ ನಿವೇಶನ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಕೇಳಿದರು.

ಡಾ. ಟಿ.ಆರ್.ಚಂದ್ರ**ಶೇಖರ್‌**ರವರು ಮಾತನಾಡಿ, ಬೇರೆ ಬೇರೆ ನೆಟ್‌ವರ್ಕ್‌ದಾರರಾದ ಬಿಎಸ್‌ಎನ್‌ಎಲ್, ಏರ್‌ಟೆಲ್, ವೋಡಾಫೋನ್, **ಇತರೆ** ಕಂಪನಿಗಳ ಟವರ್‌ಗಳನ್ನು ಅಳವಡಿಸುವುದರ ಬದಲಾಗಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮೊಬೈಲ್‌ನ ನೆಟ್‌ವರ್ಕ್‌ನ್ನು ಉನ್ನತೀಕರಿಸಲು ಬೇರೆ ಯಾವುದಾದರೂ ಮಾರ್ಗವನ್ನು ಕಂಡುಕೊಳ್ಳುವುದು **ಸೂಕ್ತ**ವೆಂದು ಸಲಹೆ ನೀಡಿದರು.

ಮಾನ್ಯ ಕುಲಪತಿ**ಗಳು** ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ನೆಟ್‌ವರ್ಕ್ ಸಮಸ್ಯೆಯಿಂದ **ಹಲವಾರು** ತೊಂದರೆಯಾಗುತ್ತಿರುವುದು ಕಂಡುಬಂದಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

- ಶ್ರೀ ಕೆ.ಗೋಕುಲ್ **ಗೋವರ್ಧನ್‌**ರವರು ಮಾತನಾಡಿ, ಸಾಮಾನ್ಯ ವಿಷಯ ಸಭೆ **2025/5.26.**

ಮೈಸೂರು ವಿಶ್ವವಿದ್ಯಾನಿ**ಲ**ಯದ ವ್ಯಾಪ್ತಿಯಲ್ಲಿರುವ ಕ್ಯಾಂಟೀನ್‌ಗಳು, ಮಳಿಗೆಗಳು, ಪೆಟ್ರೋಲ್ ಬಂಕ್, ಎಸ್‌ಬಿಐ ಬ್ಯಾಂಕ್‌ನ ಶಾಖೆ**ಗಳು,** ಅಂಚೆ ಕಛೇರಿ ಹಾಗೂ ವಾಣಿಜ್ಯ ಸಂಕೀರ್ಣಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಸಂಬಂಧ ಬಹಿರಂಗ **ಹರಾಜಿ**ನ ಪ್ರಕ್ರಿಯೆಯಲ್ಲಿ ನಾವು ಕೆಲವು ಸಿಂಡಿಕೇಟ್ ಸದಸ್ಯರು ಸಹ ಸದರಿ ಸಂದರ್ಭದಲ್ಲಿ ಹಾಜರಿದ್ದು, ಬಹಿರಂಗ **ಹರಾಜು** ಸುಸೂತ್ರವಾಗಿ ಜರುಗಿತ್ತೆಂದು ಸಭೆಯ ಗಮನಕ್ಕೆ ತಂದರು.

ಮುಂದುವರೆದು **ವಿಶ್ವ**ವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಗೊಳಿಸಿರುವುದು ಸ್ವಾಗತಾರ್ಹ. ಏಕೆಂದರೆ ಕಾರ್ಯಪಾಲಕ ಅಭಿಯಂತರರ ಕಾರ್ಯಕ್ಷಮತೆಯ ಬಗ್ಗೆ ಹಲವಾರು ದೂರುಗ**ಳಿದ್ದು** ಹಿಂದೆ ಸಾಕಷ್ಟು ಬಾರಿ ಕಾರ್ಯಪಾಲಕ ಅಭಿಯಂತರರ ವಿರುದ್ಧ ದೂರು ನೀಡಿರುತ್ತೇವೆ ಎಂದು ತಿಳಿಸಿದರು. **ಇದೇ** ರೀತಿ ಹಣಕಾಸು ಅಧಿಕಾರಿಗಳು ಸಹ ತಮ್ಮ ಕರ್ತವ್ಯದಿಂದ ಹಿಂದೆ ಸರಿಯುತ್ತಿದ್ದಾರೆ. ಹಲವು ಸಿಂಡಿ**ಕೇಟ್** ಸಭೆಯಲ್ಲಿ ಮಾಹಿತಿ ಕೇಳಿದರು ಅವರು ಸಮಜಾಯಿಷಿ ನೀಡಿ ಕರ್ತವ್ಯದಿಂದ ಜಾರಿಕೊಳ್ಳುತ್ತಿರು**ವು**ದು ನಮ್ಮೆಲ್ಲ ಸಿಂಡಿಕೇಟ್ ಸದಸ್ಯರಲ್ಲಿ ಬೇಸರವನ್ನುಂಟು ಮಾಡುತ್ತಿದೆ.ಇದೇ ರೀತಿ ಮುಂದುವರೆದರೆ **ಹಣಕಾಸು** ಅಧಿಕಾರಿಯವರನ್ನು ಸಹ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸ**ಬೇಕು** ಎಂದು ಸಿಂಡಿಕೇಟ್ ಸದಸ್ಯರ ಪರವಾಗಿ **ತಿಳಿ**ಸುತ್ತೇವೆ ಎಂದರು. ಹಣಕಾಸು ಅಧಿಕಾರಿಯವರಿಗೆ **ಮೈ**ಸೂರು ವಿಶ್ವವಿದ್ಯಾನಿಲಯದ ಮಳಿಗೆಗಳ ಬಾಡಿಗೆಗಳ ವಿಚಾರವಾಗಿ ಪ್ರತ್ಯೇಕ ಲೆಡ್ಜರ್ ಪುಸ್ತಕವನ್ನು ತೆರೆಯಲು ಸೂಚಿಸಿರುತ್ತೇವೆ, ಯಾವ ಯಾವ ತಿಂಗಳು ಬಾಡಿಗೆ ಹಣದ ರೂಪದಲ್ಲಿ ಎಷ್ಟು ಹಣ ವಿಶ್ವವಿದ್ಯಾನಿಲಯ**ಕ್ಕೆ** ಸಂದಾಯವಾಗಿದೆ, ವಸೂಲಾತಿಗೆ ಬಾಕಿ ಇರುವ ಹಣ ಎಷ್ಟು, ಯಾವ ಕಾರಣಕ್ಕೆ ಬಾಡಿಗೆ ಹಣ ವಸೂಲಾಗಿರು**ವುದಿಲ್ಲ** ಎಂಬುದರ ಕುರಿತು ದಾಖಲಿಸುವುದಕ್ಕೆ ತಿಳಿಸಿದರೂ ಕೂಡ ಇವರು ಯಾವುದೇ ಕ್ರಮ ತೆಗೆದುಕೊಂಡಿರು**ವುದಿಲ್ಲ**. ನನಗೆ ತಿಳಿದ ಮಟ್ಟಿಗೆ ಪೆಟ್ರೋಲ್‌ಬಂಕ್‌ನ ಬಾಡಿಗೆ 2023ರಿಂದ ಬಾಕಿ ಇರುತ್ತದೆ. ಮುಂದುವರೆದು, **ವಿಶ್ವ**ವಿದ್ಯಾನಿಲಯದಲ್ಲಿ ಸ್ವಲ್ಪ ದಿನದ ಹಿಂದೆ ಒಂದು ಲೇಖನ ಸಾಮಗ್ರಿ ಮಳಿಗೆಗೆ ಬಹಿರಂಗ ಹರಾಜು ಜರುಗಿದ್ದು, **ಅಲ್ಲಿ**ಗೆ ನಾವು ಕೂಡ ಬೇಟಿ ನೀಡಿರುತ್ತೇವೆ. ಒಬ್ಬ ವ್ಯಕ್ತಿಯು ಲೇಖನ ಸಾಮಗ್ರಿ ಮಳಿಗೆಗೆ ರೂ.13,000/-**ಕ್ಕೆ ಹರಾಜಿ**ನಲ್ಲಿ ಪಡೆದುಕೊಂಡಿರುತ್ತಾರೆ. ಎರಡು ದಿನಗಳ ನಂತರ ಆ ವ್ಯಕ್ತಿಯು ಅಲ್ಲಿ ಲೇಖನ ಸಾಮಗ್ರಿಯ ಮಳಿಗೆಯು ಈಗಾಗಲೇ ಇದೆ, ನಾನು ಲೇಖನಸಾಮಗ್ರಿ ಮಳಿಗೆ ಇಡುವುದರಿಂದ ಈಗಾಗಲೇ ಸದರಿ ಕಟ್ಟಡದಲ್ಲಿ ಲೇಖನ ಸಾಮಾಗ್ರಿ ಮಾರಾಟ ಮಳಿಗೆ ಇರುವುದರಿಂದ ಎರಡೆರಡು ಲೇಖನ ಸಾಮಾಗ್ರಿ ಮಾರಾಟ ಮಳಿಗೆ ಒಂದೇ ಕಟ್ಟಡದಲ್ಲಿ ಇರುವುದರಿಂದ ಲೇಖನ ಸಾಮಾಗ್ರಿಯ ಮಳಿಗೆದಾರರಿಗೆ ಮಾಸಿಕ ನಿಗದಿಪಡಿಸಿರುವ ಬಾಡಿಗೆ

ಮೊತ್ತ ರೂಪಾಯಿ ಮೂರು ಸಾವಿರವಿದ್ದು ಸದರಿ ವಿಸ್ತೀರ್ಣವುಳ್ಳ ಕಟ್ಟಡದಲ್ಲಿ ನಾನು ಸಹ ಲೇಖನ ಸಾಮಾಗ್ರಿಯ ಮಳಿಗೆಯನ್ನು ತೆರೆದರೆ ರೂ.13,000/-ಗಳ ಮಾಸಿಕ ಬಾಡಿಗೆಯನ್ನು ಪಾವತಿಸಲು ಕಷ್ಟವಾಗುತ್ತದೆ. ಏಕೆಂದರೆ ಒಬ್ಬರಿಗೆ ರೂ.3000/- ಮತ್ತೊಬ್ಬರಿಗೆ ರೂ.13,000/- ಇದು ತಾರತಮ್ಯವೆಂದು ತಮ್ಮ ಅಳಲನ್ನು ತೋಡಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಅವಧಿ ಪೂರ್ಣಗೊಂಡಿರುವ ರೂ.3,000/-ಗಳನ್ನು ಪಾವತಿಸುತ್ತಿರುವ ಮಳಿಗೆದಾರರನ್ನು ತೆರವುಗೊಳಸಿರುವುದಿಲ್ಲ ಆದುದರಿಂದ ಈ ರೀತಿಯಾಗಿ ಅವಧಿ ಮುಗಿದ ನಂತರವೂ ಮಳಿಗೆಯನ್ನು ತೆರವುಗೊಳಸದೇ ಇರುವ ಬಾಡಿಗೆದಾರರನ್ನು ಆದಷ್ಟು ಶೀಘ್ರವಾಗಿ ತೆರವುಗೊಳಸಲು ಅಗತ್ಯ ಕ್ರಮವಹಿಸಬೇಕಾಗಿರುತ್ತದೆಯೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಪಾಲಕ ಅಭಿಯಂತರರ ಕೆಲಸ ವಿಶ್ವವಿದ್ಯಾನಿಲಯದ ಮಳಿಗೆಗಳ ಬಾಡಿಗೆ ವಸೂಲಾತಿ, ದುರಸ್ಥಿಗಳ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಟೆಂಡರ್‌ಗಳ ಕೆಲಸಗಳಾಗಿರುತ್ತದೆ. ಇದನ್ನು ಸರಿಯಾಗಿ ನಿಭಾಯಿಸದೆ, ಕೇವಲ ಟೆಂಡರ್, ಬಿಲ್ ಪರಿಶೀಲನೆ ಎಂಬ ನೆಪವನ್ನಿಟ್ಟುಕೊಂಡು ಸಮಯ ವ್ಯರ್ಥ ಮಾಡದೆ, ಈ ಬಗ್ಗೆ ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸಬೇಕಿತ್ತು. ಈ ಬಗ್ಗೆ ಸಾಕಷ್ಟು ತಿಳುವಳಿಕೆ ನೋಟೀಸು ನೀಡಿದ್ದರು ಕಾರ್ಯವೈಖರಿ ಬದಲಾಯಿಸಿಕೊಳ್ಳದೆ ಇದ್ದುದರಿಂದ ಮೈಸೂರು ವಿಶ್ವವಿದ್ಯಾನಿಲಯ ಕರ್ತವ್ಯದಿಂದ ಬಿಡುಗಡೆ ಮಾಡಿದೆ. ಅದೇ ರೀತಿ ಸಹಾಯಕ ಅಭಿಯಂತರರು ಸಹ ಮಂದಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾನಸಗಂಗೋತ್ರಿಯ ಆವರಣದಲ್ಲಿರುವ ಅನಧಿಕೃತ ಫ್ಲೆಕ್ಸ್ ತೆರವುಗೊಳಿಸುವುದಕ್ಕೆ ತಿಳಿಸಿದರೂ ಸಹ ಯಾರೊಬ್ಬರು ಕಾರ್ಯಪಾಲಕ ಅಭಿಯಂತರರ ಕಛೇರಿಯಿಂದ ಅನಧಿಕೃತ ಫ್ಲೆಕ್ಸ್ ತೆರವುಗೊಳಿಸುವುದಕ್ಕೆ ಹೋಗಿರುವುದಿಲ್ಲ. ಕಾರ್ಯಪಾಲಕ ಅಭಿಯಂತರರ ಕಛೇರಿ ಸಕ್ರಿಯವಾಗಿ ಕೆಲಸ ನಿರ್ವಹಿಸಲು ವಿಫಲವಾಗಿರುವುದರಿಂದ ಮಳಿಗೆಗಳ ಬಾಡಿಗೆದಾರರಿಂದ ಮಾಸಿಕ ಲೈಸೆನ್ಸ್ ಶುಲ್ಕವನ್ನು ನಿಗದಿತ ವೇಳೆಯಲ್ಲಿ ವಸೂಲಾತಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಮಳಿಗೆದಾರರಿಗೆ ನೋಟಿಸ್ ನೀಡುವಂತೆ ತಿಳಿಸಿದ್ದೇವೆಂದರು. ಈ ನಿಟ್ಟಿನಲ್ಲಿ ಇಂಜಿನಿಯರಿಂಗ್ ಶಾಖೆಯನ್ನು ಉನ್ನತ ಮಟ್ಟಕ್ಕೇರಿಸಲು ಕ್ರಮಕೈಗೊಳ್ಳಬೇಕೆಂದು, ಇಲ್ಲದಿದ್ದಲ್ಲಿ ಇನ್ನು ಮುಂದೆಯು ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲವೆಂದು ಸಭೆಗೆ ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ಸಹಾಯಕ ಅಭಿಯಂತರರಾದ ಶ್ರೀ ಉಮೇಶ್‌ರವರು ಕೂಡ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುವುದಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಶ್ರೀ ಉಮೇಶ್‌ರವರಿಗೂ ಸಹ ಎಚ್ಚರಿಕೆ ಸಂದೇಶವನ್ನು ನೀಡುತ್ತೇವೆ, ಕರ್ತವ್ಯ ಲೋಪವೆಸಗಿದರೆ ನಿಯಮಗಳನ್ವಯ ಶಿಸ್ತುಕ್ರಮ ವಹಿಸಲಾಗುವುದು ಅಥವಾ ಅಮಾನತ್ತು ಕ್ರಮವಹಿಸಲಾಗುವುದು ಎಂದರು.

- ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, 5ನೇ ಸಾಮಾನ್ಯ ಸಭೆಯ ಇತರೆ ವಿಷಯ ಸಂಖ್ಯೆ: 04ರ ವಿಷಯ ಒಳಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವ ಕ್ರಮಕೈಗೊಳ್ಳಲಾಗಿದೆಯೇ ಎಂದು ಕೇಳಿದರು.

  ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಸರ್ಕಾರವು ನೀಡಿರುವ ನಿರ್ದೇಶನದಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಡಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

- ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, 5ನೇ ಸಾಮಾನ್ಯ ಸಭೆಯ ಇತರೆ ವಿಷಯ ಸಂಖ್ಯೆ: 08ರ ವಿಷಯ ಸಂಬಂಧಿಸಿದಂತೆ ಇಎಂಆರ್‌ಸಿ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಕೇಳಿದರು.

  ಮಾನ್ಯ ಕುಲಪತಿಗಳು, ಇಎಂಆರ್‌ಸಿ ನಿರ್ದೇಶಕರ ಹುದ್ದೆ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು.

- ಶ್ರೀ ಮಹದೇಶುರವರು ಮಾತನಾಡಿ, 5ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 2025/5.6ಕ್ಕೆ ಸಂಬಂಧಿಸಿದಂತೆ ಶ್ರೀ ನಿಖಿಲ್‌ಗೌಡ ಜೆ, ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಕುರಿತು ವಿಚಾರಣಾ ಸಮಿತಿಯನ್ನು ರಚಿಸಲಾಗಿದೆಯೇ ಎಂದು ಕೇಳಿದರು.

  ಮಾನ್ಯ ಕುಲಪತಿಯವರು ಮಾತನಾಡಿ, ಸಮಿತಿ ರಚಿಸಿರುವುದಿಲ್ಲ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಶ್ರೀ ನಿಖಿಲ್‌ಗೌಡ ಜೆ. ಇವರು ವೈಯಕ್ತಿಕ ಸಮಸ್ಯೆಯಿಂದ ಗೈರುಹಾಜರಾಗಿರುತ್ತಾರೆ. ಆದುದರಿಂದ ಮಾನವೀಯತೆಯ ಆಧಾರದ ಮೇಲೆ ಕರ್ತವ್ಯಕ್ಕೆ ವರದಿ ಮಾಡಿಸಿಕೊಳ್ಳಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ಶ್ರೀ ನಿಖಿಲ್‌ಗೌಡ ಜೆ ಇವರಿಗೆ ಹಲವು ಬಾರಿ ನೋಟಿಸ್ ನೀಡಿರುತ್ತೇವೆ ಅವರು ನೋಟಿಸ್ ಕೂಡ ತೆಗೆದುಕೊಂಡಿರುವುದಿಲ್ಲ ಹಾಗೂ ಉತ್ತರವನ್ನು ಸಹ ನೀಡಿರುವುದಿಲ್ಲ, ಎಲ್ಲರಿಗೂ ಸಮಸ್ಯೆ ಇದ್ದೇ ಇರುತ್ತದೆ, ಆದರೆ ಎರಡು ವರ್ಷಗಳ ಕಾಲ ಗೈರುಹಾಜರಾಗಿರುವುದು ಸರಿಯಾದ ಕ್ರಮವಲ್ಲ, ಒಬ್ಬ ಸರ್ಕಾರಿ ನೌಕರ ಸೂಕ್ತ ಮಾಹಿತಿಯನ್ನು ನೀಡಿ ರಜೆಯನ್ನು ಮುಂದುವರೆಸಿಕೊಂಡು ಹೋಗಬಹುದೇ ಹೊರತು ಗೈರುಹಾಜರಾಗುವುದು ನಿಯಮಗಳಿಗೆ ವಿರುದ್ಧವಾಗಿರುತ್ತದೆಯೆಂದು ತಿಳಿಸುತ್ತಾ ಕೆಸಿಎಸ್‌ಆರ್ ನಿಯಮದಂತೆ ಕ್ರಮವಹಿಸುವುದಾಗಿ ತಿಳಿಸಿದರು.

- ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, 5ನೇ ಸಾಮಾನ್ಯ ಸಭೆಯ ಇತರೆ ವಿಷಯ ಸಂಖ್ಯೆ: 14ಕ್ಕೆ ಸಂಬಂಧಿಸಿದಂತೆ, ಪ್ರೊ. ದೇವರಾಜೇಗೌಡರವರು ಯುವರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಅವಧಿಯಲ್ಲಿ ನಡೆದಿರುವ ಹಣ ದುರುಪಯೋಗದ ಕುರಿತು ತನಿಖೆ ಮಾಡುವುದರ ಬಗ್ಗೆ ಸಮಿತಿ ರಚಿಸಲಾಗಿದೆಯೇ ಎಂದು ಕೇಳಿದರು. ಈ ಸಂಬಂಧ ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಸಹ ದನಿಗೂಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಇದುವರೆಗೂ ಈ ಸಂಬಂಧ ಯಾವುದೇ ಸಮಿತಿಯನ್ನು ರಚಿಸಿರುವುದಿಲ್ಲ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಹಣಕಾಸು ವಿಷಯವಾಗಿ ಲೆಕ್ಕಪರಿಶೋಧನೆ ನಡೆದು, ವರದಿಯಲ್ಲಿ ಹಣಕಾಸು ದುರುಪಯೋಗ ಕಂಡು ಬಂದರೆ ನಾವು ಕ್ರಮಕ್ಕೈಗೊಳ್ಳಬಹುದು ಆದರೆ ಸದರಿ ಕಾಲೇಜಿನಲ್ಲಿ ಹಣ ದುರುಪಯೋಗವಾಗಿರುವುದರ ಕುರಿತು ಯಾವುದೇ ಮಾಹಿತಿಯು ಹಣಕಾಸು ಶಾಖೆಯಿಂದ ಇಲ್ಲವಾಗಿದೆ ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ಸಭೆಯಲ್ಲಿ ಮಾನ್ಯ ಕುಲಪತಿಗಳು ಖಾಸಗಿ ಲೆಕ್ಕಪರಿಶೋಧಕರಿಂದ ಲೆಕ್ಕ ತಪಾಸಣೆ ನಡೆಸಿ ಒಂದು/ಎರಡು ತಿಂಗಳ ಅವಧಿಯೊಳಗೆ ವರದಿ ಪಡೆದುಕೊಳ್ಳುವುದಾಗಿ ತಿಳಿಸಿದ್ದರು. ಮುಂದುವರೆದು, ಸದರಿ ಕಾಲೇಜಿನಲ್ಲಿ ಹಣದ ಮೂಲವೇ ವಿದ್ಯಾರ್ಥಿಗಳ ಶುಲ್ಕ ಅಥವಾ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ. 2023-24ರಿಂದ ಇದುವರೆಗೂ ಎಷ್ಟು ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ, ಯಾವ ಯಾವ ವಿಷಯ(ಕೋರ್ಸ್)ಕ್ಕೆ ಪ್ರವೇಶಾತಿ ಪಡೆದಿರುತ್ತಾರೆ, ಕೋರ್ಸ್ ಶುಲ್ಕ ಎಷ್ಟು, ಬ್ಯಾಂಕ್ ಖಾತೆಗೆ ವಿದ್ಯಾರ್ಥಿಗಳಿಂದ ಶುಲ್ಕದ ರೂಪದಲ್ಲಿ ಜಮಾವಾಗಿರುವ ಹಣದ ಮೊತ್ತ ಅಥವಾ ಶುಲ್ಕ ಜಮೆಯಾಗಿಲ್ಲ ಎಂಬ ಮಾಹಿತಿ ಮಾತ್ರ ಸಂಗ್ರಹಿಸಬೇಕಾಗಿದೆ ಅಷ್ಟೇ. ಆದುದರಿಂದ ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆ ಚಾರ್ಟೆಡ್ ಅಕೌಂಟೆಂಟ್‌ರವರಿಂದ ಲೆಕ್ಕ ತಪಾಸಣೆಯನ್ನು ಮಾಡಿಸಿ ಒಂದು ಅಥವಾ ಎರಡು ತಿಂಗಳಲ್ಲಿ ವರದಿ ಪಡೆಯುವುದು ಸೂಕ್ತವೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಹಣ ದುರುಪಯೋಗವಾಗಿದ್ದು ಇದರ ಬಗ್ಗೆ ಕೂಡಲೆ ತನಿಖೆ ನಡೆಸಬೇಕು ನಾವು ಪ್ರೊ. ದೇವರಾಜೇಗೌಡರು ಪ್ರಾಂಶುಪಾಲರಾಗಿದ್ದ ಅವಧಿ ಮಾತ್ರವಲ್ಲದೇ ಕಳೆದ 10 ವರ್ಷಗಳಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿರುವವರ ಅವಧಿಯಲ್ಲಿ ಹಣದ ದುರುಪಯೋಗವಾಗಿದೆಯೇ ಎಂಬುದರ ಬಗ್ಗೆ ತನಿಖೆ ನಡೆಸಬೇಕು, ಏಕೆಂದರೆ ಇದು ಕೋಟ್ಯಾಂತರ ರೂಪಾಯಿಗಳ ಪ್ರಕರಣವಾಗಿದ್ದು ಹಾಗೂ ಬಡಮಕ್ಕಳ ಹಣವಾಗಿರುತ್ತದೆ ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ನಡೆದ ಘಟನೆಯ ನಂತರ ಯುವರಾಜ ಕಾಲೇಜು, ಮಹಾರಾಜ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶುಲ್ಕ ಪಾವತಿಯಾಗಿದೆಯೇ ಎಂಬುದರ ಕುರಿತು ವಿಶ್ವವಿದ್ಯಾನಿಲಯದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ, ಪ್ರತಿ ವರ್ಷ ಲೆಕ್ಕಪರಿಶೋಧನೆ ನಡೆಯುತ್ತಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಲೆಕ್ಕಪರಿಶೋಧನೆ ನಡೆಸಿದರೆ ಮಾಹಿತಿ ಸಿಗುತ್ತದೆಯೆಂದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸದರಿ ಪ್ರಕರಣದ ಕುರಿತು ಇದುವರೆಗೂ ಕ್ರಮಕ್ಕೈಗೊಳ್ಳಲು ವಿಳಂಬವಾಗಿರುವುದಕ್ಕೆ ಕಾರಣವೇನೆಂದು ಕೇಳಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ, ಹಳೆಯ ದಾಖಲೆಗಳು ಯಾವುದು ಸಹ ಲಭ್ಯವಿಲ್ಲ, ಕಾಲೇಜಿನಲ್ಲಿನ ಹಣಕಾಸು ಸಮಿತಿ ಸಭೆಯಲ್ಲಿ ಹಾಜರಾಗಿದ್ದಾಗ ಸದರಿ ಕಾಲೇಜಿನಲ್ಲಿರುವ ಒಟ್ಟು 18 ಉಳಿತಾಯ ಖಾತೆಗಳನ್ನು ಮುಕ್ತಾಯಗೊಳಿಸಿ ಅವಶ್ಯಕತೆಗೆ ತಕ್ಕಂತೆ ಖಾತೆಗಳನ್ನು ಉಳಿಸಿಕೊಳ್ಳುವಂತೆ ಈಗಾಗಲೇ ಸೂಚನೆಯನ್ನು ನೀಡಲಾಗಿರುತ್ತದೆ. ಖಾತೆಗಳಲ್ಲಿನ ಆರಂಭಿಕ ಶಿಲ್ಕು ಮತ್ತು ಅಂತಿಮ ಶಿಲ್ಕುಗಳ ಮಾಹಿತಿಗಳೇ ಇರುವುದಿಲ್ಲವೆಂದು ತಿಳಿಸಿ ಈ ಸಂಬಂಧ ವರದಿ ನೀಡುವಂತೆ ಯುವರಾಜ ಕಾಲೇಜಿನ ಪ್ರಾಂಶುಪಾಲರಿಗೆ ತಿಳಿಸಿದ್ದರೂ ಕೂಡ ಇಲ್ಲಿಯವರೆಗೂ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ಯುವರಾಜ ಮತ್ತು ಮಹಾರಾಜ ಕಾಲೇಜಿನ ಬಾಕಿ ಹಣದ ಮಾಹಿತಿಯೇ ಇರುವುದಿಲ್ಲವೆಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, 2024ರವರೆಗೆ ಯುವರಾಜ ಕಾಲೇಜಿನಲ್ಲಿದಂತಹ ಖಾತೆಗಳನ್ನು ಸಂಪೂರ್ಣ ರದ್ದುಪಡಿಸಿ, 2025ರಿಂದ ಎಸ್‌ಬಿಐನಲ್ಲಿ ಹೊಸ ಖಾತೆ ತೆರೆಯುವುದು ಸೂಕ್ತ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನ 2023-24 ಮತ್ತು 2024-25ನೇ ಸಾಲಿನ ಆರ್ಥಿಕ ವರ್ಷದ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿಕೊಡುವಂತೆ ಕೋರಿ ಈಗಾಗಲೇ ಸರ್ಕಾರಿ ಲೆಕ್ಕಪರಿಶೋಧಕರನ್ನು ಕೋರಲಾಗಿ ಸದರಿಯವರು ಈವರೆಗೂ ಯಾವುದೇ ಕ್ರಮವನ್ನು ವಹಿಸಿರುವುದಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಯುವರಾಜ ಮತ್ತು ಮಹಾರಾಜ ಕಾಲೇಜುಗಳ ಹಣಕಾಸಿಗೆ ಸಂಬಂಧಪಟ್ಟಂತೆ ಪ್ರತಿವರ್ಷ ಲೆಕ್ಕಪರಿಶೋಧನೆ ನಡೆಯಬೇಕು, ಇದರಲ್ಲಿ ತಪ್ಪಾಗಿರುವುದು ಕಂಡು ಬಂದರೆ ಕೂಡಲೇ ವಿಶ್ವವಿದ್ಯಾನಿಲಯ ಕ್ರಮಕೈಗೊಳ್ಳುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಹಣಕಾಸು ಅಧಿಕಾರಿಗಳು ಕೂಡಲೇ ಮಹಾರಾಜ ಮತ್ತು ಯುವರಾಜ ಕಾಲೇಜುಗಳ ಹಣಕಾಸಿನ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು,

- ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, 5ನೇ ಸಾಮಾನ್ಯ ಸಭೆಯ ಇತರೆ ವಿಷಯ ಸಂಖ್ಯೆ: 15ಕ್ಕೆ ಸಂಬಂಧಿಸಿದಂತೆ, ಪ್ರೊ.ಬಿ.ಎಸ್.ವಿಶ್ವನಾಥ್ ಅವರಿಗೆ ಪಿಂಚಣಿಯ ಸೌಲಭ್ಯಗಳನ್ನು ಪಾವತಿ ಮಾಡುವ ಕುರಿತು ಕ್ರಮಕೈಗೊಳ್ಳಲಾಗಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಪ್ರೊ.ಬಿ.ಎಸ್.ವಿಶ್ವನಾಥ್ ಇವರ ಪ್ರಕರಣದಲ್ಲಿ ಭಾಗಿಯಾದ ಇತರ ಪ್ರಾಧ್ಯಾಪಕರಿಗೆ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡಿರುವಂತೆ ಪ್ರೊ. ಬಿ.ಎಸ್.ವಿಶ್ವನಾಥ್ ಇವರಿಗೂ ಸಹ ಪಿಂಚಣಿ ಸೌಲಭ್ಯಗಳನ್ನು ಪಾವತಿ ಮಾಡುವಂತೆ ಹಣಕಾಸು ಅಧಿಕಾರಿಗಳಿಗೆ ಪತ್ರ ರವಾನಿಸಲಾಗಿದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಪ್ರೊ.ಬಿ.ಎಸ್.ವಿಶ್ವನಾಥ್‌ರವರ ವಿರುದ್ಧ ಕ್ರಿಮಿನಲ್ ದೂರು ದಾಖಲಾಗಿದೆ ಎಂದು ಕೇಳಿಬಂದಿರುತ್ತದೆಯೆಂದು ತಿಳಿಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಪ್ರೊ.ಬಿ.ಎಸ್.ವಿಶ್ವನಾಥ್‌ರವರ ವಿರುದ್ಧ ದಾಖಲಾಗಿರುವ ಮೊಕದ್ದಮೆ ಸಂಬಂಧ ಈಗಾಗಲೇ ಬಿ ರಿಪೋರ್ಟ್ ಸಲ್ಲಿಸಲಾಗಿರುತ್ತದೆ ಆದರೂ ಸಹ ಸದರಿಯವರಿಗೆ ಯಾವುದೇ ಪಿಂಚಣಿ ಸೌಲಭ್ಯಗಳನ್ನು ಪಾವತಿಸಿರುವುದಿಲ್ಲವೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಪ್ರೊ.ಬಿ.ಎಸ್.ವಿಶ್ವನಾಥ್‌ರವರಿಗೆ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಪಾವತಿಸುವುದಾಗಿ ತಿಳಿಸಿದರು.

ಡಾ. ಮಹೇಶ್ ಟಿ.ಬಿ.ರವರು ಮಾತನಾಡಿ, 5ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 5.22ಕ್ಕೆ ಸಂಬಂಧಿಸಿದಂತೆ, ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್., ಕಾಲೇಜ್ ಆಫ್ ಎಜುಕೇಷನ್, ಕುವೆಂಪು ನಗರ, ಮೈಸೂರು ರವರು ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳ ಪ್ರತಿಷ್ಠೆ ಮತ್ತು ಘನತೆಯ ಮೇಲೆ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ನಿರಂತರ ದೋಷಾರೋಪಣೆ ಮಾಡುತ್ತಲೇ ಇದ್ದಾರೆ ಈ ಕುರಿತು ಕಳೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಯಾವ ಕ್ರಮ ವಹಿಸಲಾಗಿದೆಯೆಂದು ಕೇಳಿದರು. ಈ ಸಂಬಂಧ ಡಾ. ನಟರಾಜು ಹೆಚ್ ಎಸ್‌ರವರು ಸಹ ದನಿಗೂಡಿಸಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್., ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು ಇವರನ್ನು ನಿರಂತರವಾಗಿ ಮೂರು ವರ್ಷಗಳ ಕಾಲ ಪರೀಕ್ಷಾ ಚಟುವಟಿಕೆಗಳಿಂದ ನಿರ್ಬಂಧಿಸಲಾಗಿದೆಯೆಂದು ತಿಳಿಸಿದರು.

| | |
|---|---|
| **ತೀರ್ಮಾನ** | **ದಿನಾಂಕ: 20-08-2025ರಂದು ಜರುಗಿದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.** |

| | |
|---|---|
| ಸಾಮಾನ್ಯ ಸಭೆ 2025/6.1 | Christ Academy of Research and Excellence (CARE), Carmel Educational Foundation), ಹೊಸೂರು-ಮಾಲೂರು ಮುಖ್ಯ ರಸ್ತೆ, ಅಲಾಂಬಾಡಿ, ಮಾಲೂರು ಇವರ ಸಂಸ್ಥೆಯಲ್ಲಿ Management Science ಮತ್ತು Commerce ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **Christ Academy of Research and Excellence (CARE), Carmel Educational Foundation), ಹೊಸೂರು-ಮಾಲೂರು ಮುಖ್ಯ ರಸ್ತೆ, ಅಲಾಂಬಾಡಿ, ಮಾಲೂರು ಇವರ ಸಂಸ್ಥೆಯಲ್ಲಿ Management Science ಮತ್ತು Commerce ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.2 | International School of Business and Research Centre, No. 107, ಎಲೆಕ್ಟ್ರಾನಿಕ್ ಸಿಟಿ ಫೇಸ್-1, ಇನ್ಫೋಸಿಸ್ ಹತ್ತಿರ, ಬಿ.ಎಸ್.ಎನ್.ಎಲ್. ಟೆಲಿಫೋನ್ ಎಕ್ಸ್‌ಚೇಂಜ್ ಹಿಂಭಾಗ, ಬೆಂಗಳೂರು ಇವರ ಸಂಸ್ಥೆಯಲ್ಲಿ ಹೆಚ್ಚುವರಿಯಾಗಿ Law ವಿಷಯದಲ್ಲಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **International School of Business and Research Centre, No. 107, ಎಲೆಕ್ಟ್ರಾನಿಕ್ ಸಿಟಿ ಫೇಸ್-1, ಇನ್ಫೋಸಿಸ್ ಹತ್ತಿರ, ಬಿ.ಎಸ್.ಎನ್.ಎಲ್. ಟೆಲಿಫೋನ್ ಎಕ್ಸ್‌ಚೇಂಜ್ ಹಿಂಭಾಗ, ಬೆಂಗಳೂರು ಇವರ ಸಂಸ್ಥೆಯಲ್ಲಿ ಹೆಚ್ಚುವರಿಯಾಗಿ Law ವಿಷಯದಲ್ಲಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.3 | ನಸೀಮಾ ರಿಸರ್ಚ್ ಸೆಂಟರ್, ಸೈಟ್ ನಂ. 02, Knowledge Street, ಬನಶಂಕರಿ 6ನೇ ಹಂತ, 4ನೇ ಬ್ಲಾಕ್, ಆರ್.ವಿ. ಕಾಲೇಜು ಹಿಂಭಾಗ, ಚಿಕ್ಕೇಗೌಡನಪಾಳ್ಯ, ಬೆಂಗಳೂರು ಇವರ ಸಂಸ್ಥೆಯಲ್ಲಿ Commerce ವಿಷಯದಲ್ಲಿ ಹೊಸದಾಗಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **ನಸೀಮಾ ರಿಸರ್ಚ್ ಸೆಂಟರ್, ಸೈಟ್ ನಂ. 02, Knowledge Street, ಬನಶಂಕರಿ 6ನೇ ಹಂತ, 4ನೇ ಬ್ಲಾಕ್, ಆರ್.ವಿ. ಕಾಲೇಜು ಹಿಂಭಾಗ, ಚಿಕ್ಕೇಗೌಡನಪಾಳ್ಯ, ಬೆಂಗಳೂರು ಇವರ ಸಂಸ್ಥೆಯಲ್ಲಿ Commerce ವಿಷಯದಲ್ಲಿ ಹೊಸದಾಗಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.4 | ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸೀಟು ಹಂಚಿಕೆ ಮಾಡುವ ಕುರಿತು. |
| | ಶ್ರೀ ಗೋಕುಲ್ ಗೋವರ್ಧನ್‌ರವರು ಹಾಗೂ ಡಾ. ನಟರಾಜ್ ಹೆಚ್ ಎಸ್ ರವರು ಮಾತನಾಡಿ, ಕುಲಸಚಿವರು (ಪರೀಕ್ಷಾಂಗ) ಹಾಗೂ ಕುಲಸಚಿವರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳುವ ನಿರ್ಧಾರಕ್ಕೆ ತಮ್ಮ ಸಮ್ಮತಿ ಇರುವುದಾಗಿ ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಯುಜಿಸಿ ಮಾರ್ಗಸೂಚಿ, ಉನ್ನತ ಶಿಕ್ಷಣ ಇಲಾಖೆಯಿಂದ ರಚಿಸಿದ ಸಮಿತಿಯ ವರದಿ, ಕರ್ನಾಟಕ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಪತ್ರ ಬರೆದಿರುವುದನ್ನು ಸಭೆಯಲ್ಲಿ ಮಂಡಿಸಿದರು. ಮುಂದುವರೆದು ಸದರಿ ವಿಷಯದ ಕುರಿತು ಈಗಾಗಲೇ ಸದನದಲ್ಲಿಯೂ ಚರ್ಚಿಸಿದ್ದು, ಪಿ.ಹೆಚ್‌ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸೀಟು ಹಂಚಿಕೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತರುತ್ತಾ ಯುಜಿಸಿ ಮಾರ್ಗಸೂಚಿಯನ್ನು ಉಲ್ಲಂಘನೆ ಮಾಡಬಾರದೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆಂದು ಹೇಳಿದರು. |

| | |
|---|---|
| | ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕವಾಗಿ ತಾವು ಯೋಜನೆಯನ್ನು ರೂಪಿಸಿರುವುದಾಗಿ ತಿಳಿಸಿದರು. ಅಂಬೇಡ್ಕರ್ ಸ್ಟಡೀಸ್ ವಿಷಯವು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರವಿರುವುದೆಂದು ತಿಳಿಸುತ್ತಾ ಇಬ್ಬರು ಖಾಯಂ ಅಧ್ಯಾಪಕರುಗಳಿದ್ದು ಈಗಾಗಲೇ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿರುತ್ತಾರೆಂದು ತಿಳಿಸಿದರು. ಕೆಲವು ವಿಭಾಗಗಳಲ್ಲಿ ಖಾಯಂ ಮಾರ್ಗದರ್ಶಕರ ಕೊರತೆ ಕಂಡು ಬಂದಂತಹ ಸಂದರ್ಭದಲ್ಲಿ interdisciplinary ವಿಷಯವನ್ನು ಬೋಧಿಸುವ ಅಧ್ಯಾಪಕರುಗಳನ್ನು ಮಾರ್ಗದರ್ಶರಕಾಗಿ ನಿಯೋಜಿಸುತ್ತೇವೆಂದು ಹಾಗೂ ಈಗಾಗಲೇ 16 ಅಧ್ಯಾಪಕರುಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೆಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಚ್ಚುವರಿ ಸೀಟು ಹಂಚಿಕೆ ಮಾಡುವ ಕುರಿತು ನಾವು ಸಹ ಧ್ವನಿ ಎತ್ತಿದ್ದೇವು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿಷಯದ ಕುರಿತು ಯುಜಿಸಿ ರೆಗ್ಯೂಲೇಷನ್‌ನ್ನು ಉಲ್ಲಂಘನೆ ಮಾಡಬಾರದೆಂದು ಸದನದಲ್ಲಿ ತಿಳಿಸಿದ್ದು, ಸದನದ ತೀರ್ಮಾನಕ್ಕೆ ಬದ್ಧರಾಗಬೇಕೆಂದು ತಿಳಿಸಿದರು.<br><br>ಪಿ.ಹೆಚ್‌ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸೀಟು ಹಂಚಿಕೆ ಮಾಡುವ ಕುರಿತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯ ಕುಲಪತಿಯವರು ತೆಗೆದುಕೊಳ್ಳುವ ನಿರ್ಧಾರಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರು ಸರ್ವಾನುಮತದಿಂದ ಒಪ್ಪಿದರು. |
| ತೀರ್ಮಾನ | **ಯುಜಿಸಿ ಮಾರ್ಗಸೂಚಿ, ಉನ್ನತ ಶಿಕ್ಷಣ ಇಲಾಖೆಯಿಂದ ರಚಿಸಿದ ಸಮಿತಿಯ ವರದಿ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ಪತ್ರದಂತೆ ನಿಯಮಾನುಸಾರ ಕ್ರಮವಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/6.5** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| ತೀರ್ಮಾನ | **ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/6.6** | ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ. |
| | ಶ್ರೀ ಮಹದೇಶುರವರು ಮಾತನಾಡಿ, ಈಜುಕೊಳದ ಪ್ರವೇಶ ಶುಲ್ಕಗಳನ್ನು ಪರಿಷ್ಕರಿಸುವುದರೊಂದಿಗೆ ಈಜುಕೊಳದ ಗುಣಮಟ್ಟವನ್ನು ಅಭಿವೃದ್ಧಿಪಡಿಸಿ ಎಂದು ತಿಳಿಸಿದರು.<br><br>ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈಜುಕೊಳದ ಸಿಬ್ಬಂದಿಗಳ ಬಗ್ಗೆ ಹಲವಾರು ದೂರುಗಳು ಬಂದಿದ್ದು, ಕುಲಸಚಿವರು ಅನಿರೀಕ್ಷಿತವಾಗಿ ಈಜುಕೊಳಕ್ಕೆ ಭೇಟಿ ನೀಡಬೇಕೆಂದು ಹಾಗೂ ಈಜುಕೊಳಕ್ಕೆ ಬರುವವರ ಖಾಸಗಿತನಕ್ಕೆ ಧಕ್ಕೆಯಾಗದಂತೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಕುಳಿತುಕೊಳ್ಳುವ ಜಾಗದಲ್ಲಿ ಸಿಸಿ ಕ್ಯಾಮರಾವನ್ನು ಅಳವಡಿಸಿದ್ದಲ್ಲಿ ಕುಲಸಚಿವರ ಕಛೇರಿಯಿಂದಲೇ ಗಮನಿಸಬಹುದೆಂದು ತಿಳಿಸಿದರು. ಈಜಕೊಳದ ಪ್ರವೇಶ ಶುಲ್ಕವನ್ನು ಪಾವತಿಸಿ ಕೋಚಿಂಗ್ ಶುಲ್ಕವನ್ನು ಪಡೆಯುತ್ತಿದ್ದು ರಶೀದಿ ನೀಡುತ್ತಿಲ್ಲವೆಂದು ದೂರುಗಳು ಬಂದಿರುವುದಾಗಿ ತಿಳಿಸಿದರು.<br><br>ಶ್ರೀ ನಾಗರಾಜು ಸಿ ರವರು ಮಾತನಾಡಿ, ಈಜುಕೊಳದಲ್ಲಿ ಒಬ್ಬರು ಖಾಯಂ ಅಧ್ಯಾಪಕೇತರರಿದ್ದು, ಉಳಿದಂತೆ 09 ತಾತ್ಕಾಲಿಕ ಉದ್ಯೋಗಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಇವರಿಗೆ ವೇತನ ರೂಪದಲ್ಲಿ ಒಂದು ಲಕ್ಷದ ಇಪ್ಪತ್ತು ಸಾವಿರ ನೀಡಲಾಗುತ್ತಿದೆ ಎಂದು ತಿಳಿಸಿದರು. ಈಜುಕೊಳದ ಆದಾಯ ರೂ.50.00 ಲಕ್ಷ ಬರುತ್ತಿರುವುದಾಗಿ ಕಂಡುಬಂದಿದೆ, ಅದರಲ್ಲಿ ರೂ.30.00 ಲಕ್ಷ ನಿರ್ವಹಣೆಗೆ ಖರ್ಚಾಗುತ್ತಿದೆ, ವರ್ಷಕ್ಕೆ ರೂ. 20.00 ಲಕ್ಷ ಉಳಿಯುತ್ತಿದೆ ಎಂದು ತಿಳಿಸಿದರು. ಉಳಿಕೆಯ ಹಣವನ್ನು ಕ್ರೀಡಾ ವಿದ್ಯಾರ್ಥಿಗಳಿಗೆ ವಿನಿಯೋಗಿಸಬಹುದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಈಜುಕೊಳದಿಂದ ಬರುವ ಆದಾಯದಲ್ಲಿ ಸಿಬ್ಬಂದಿಗಳಿಗೆ ವೇತನ, ತರಬೇತುದಾರರ ವೇತನ, ಕೆಮಿಕಲ್ಸ್ ಖರೀದಿ, ನಿರ್ವಹಣೆ ವೆಚ್ಚವೇ ಅಧಿಕವಾಗಿರುತ್ತದೆಂದು ತಿಳಿಸಿದರು. |

| | |
|---|---|
| | ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈಜುಕೊಳದ ಮುಂಭಾಗದಲ್ಲಿ, ಸ್ಪೋರ್ಟ್ಸ್ ಪೆವಿಲಿಯನ್, ಓವೆಲ್ ಗ್ರೌಂಡ್ ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ನಡೆಯುವಂತಹ ಕ್ರೀಡೆಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡುತ್ತಿರುವ ಆಯಾಯಾ ಸ್ಥಳಗಳಲ್ಲಿ ನಾಮಫಲಕಗಳನ್ನು ಅಳವಡಿಸಿ, ಕೋಚಿಂಗ್ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಿ ಕೋಚಿಂಗ್ ಪಡೆಯತಕ್ಕದ್ದು ಎಂದು ನಮೂದಿಸಬೇಕು ಹಾಗೂ ಸಮಸ್ಯೆ/ದೂರುಗಳೇನಾದರೂ ಇದ್ದಲ್ಲಿ ಕುಲಸಚಿವರ ಕಛೇರಿಯ ದೂರವಾಣಿಗೆ ಸಂಪರ್ಕಿಸುವಂತೆ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕೆಂದು ತಿಳಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ಶುಲ್ಕಗಳನ್ನು ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/6.7 | 2026ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರುಗಳಿಗೆ ಅನುಮತಿ ನೀಡುವ ಬಗ್ಗೆ. |
| | ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಯೋನಿವೃತ್ತಿ ಹೊಂದುವ ಉದ್ಯೋಗಿಗಳು ವಿಶ್ವವಿದ್ಯಾನಿಲಯಕ್ಕೆ ಸೇವೆಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಸದರಿ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಸತ್ಕರಿಸಿ ಬೀಳ್ಕೊಡುವುದು ಸೂಕ್ತವೆಂದು ಸಲಹೆ ನೀಡಿದರು.<br>ಕುಲಸಚಿವರು ಮಾತನಾಡಿ, ವಯೋನಿವೃತ್ತಿ ಹೊಂದುವ ಉದ್ಯೋಗಿಗಳು ಕರ್ತವ್ಯ ಸಲ್ಲಿಸುತ್ತಿರುವ ವಿಭಾಗಗಳಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಿ ಸದರಿ ಉದ್ಯೋಗಿಗಳನ್ನು ಗೌರವಯುತವಾಗಿ ಬೀಳ್ಕೊಡುವ ಕಾರ್ಯವು ಚಾಲ್ತಿಯಲ್ಲಿದೆ ಎಂದು ತಿಳಿಸಿದರು.<br>ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ವಯೋನಿವೃತಿ ದಿನದಂದೇ ಮಾನ್ಯ ಕುಲಪತಿಯವರ ಕಛೇರಿಯಲ್ಲಿ ನೆನಪಿನ ಕಾಣಿಕೆ ನೀಡುವುದರೊಂದಿಗೆ ಅವರುಗಳನ್ನು ಸತ್ಕರಿಸಿ ಪಿಂಚಣಿ ಮಂಜೂರಾತಿ ಆದೇಶವನ್ನು ನೀಡಲಾಗುತ್ತಿದೆಯೆಂದು ತಿಳಿಸಿದರು. |
| ತೀರ್ಮಾನ | **2026ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರುಗಳಿಗೆ ನಿವೃತ್ತಿ ಹೊಂದಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.8 | ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಪ್ರೊ. ಸಿ.ರಾಮಸ್ವಾಮಿ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/6.9 | ಭೂಗೋಳಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಡಾ. ಜಾಕೀರ್ ಹುಸೇನ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಭೂಗೋಳಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಡಾ. ಜಾಕೀರ್ ಹುಸೇನ್ ಅಧ್ಯಯನ ಪೀಠಕ್ಕೆ ಪ್ರೊ. ರಾಮು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2025/6.10 | ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಮತ್ತು Probiota Innovations Pvt. Ltd., ಮೈಸೂರು-570 018 ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| | ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸಂಸ್ಥೆಗಳಿಗೆ ಪತ್ರ ವ್ಯವಹಾರ ನಡೆಸಿ ಮನವೊಲಿಸುವ ಕ್ರಮ ಕೈಗೊಳ್ಳಬೇಕೆಂದರು. ಮುಂದುವರೆದು, ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಕ್ರಮವಹಿಸದೇ ಇರುವ ವಿಭಾಗಗಳ ಮುಖ್ಯಸ್ಥರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ ಸಂಸ್ಥೆಗಳಿಂದ ಒಡಂಬಡಿಕೆ ಮಾಡುವ ಪೂರ್ವದಲ್ಲಿ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗುತ್ತದೆಯೆಂದು ತಿಳಿಸಿದರು. |

| | |
|---|---|
| ತೀರ್ಮಾನ | **ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಮತ್ತು Probiota Innovations Pvt. Ltd., ಮೈಸೂರು-570 018 ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.11 | ನಿರ್ದೇಶಕರು, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು ಸಂಸ್ಥೆಯೊಂದಿಗೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | **ನಿರ್ದೇಶಕರು, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು ಸಂಸ್ಥೆಯೊಂದಿಗೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.12 | ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದೀನದಯಾಳ್ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿರುವ ವಿಶ್ವವಿದ್ಯಾನಿಲಯದ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದೀನದಯಾಳ್ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿರುವ ವಿಶ್ವವಿದ್ಯಾನಿಲಯದ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡುವ ಸಂಬಂಧ ಈ ಕೆಳಕಂಡವರುಗಳಿಂದ ಅಂದಾಜು ಪಟ್ಟಿಯನ್ನು ಪಡೆಯಲಾಗಿರುತ್ತದೆ.<br>1. ಕಾರ್ಯಾಧ್ಯಕ್ಷರು, ಮೈಸೂರು ನಿರ್ಮಿತಿ ಕೇಂದ್ರ, ಮೈಸೂರು.<br>2. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ, ಮೈಸೂರು ವಿಭಾಗ, ಮೈಸೂರು ಮತ್ತು<br>3. ಕಾರ್ಯಪಾಲಕ ಅಭಿಯಂತರರು, ಮೈಸೂರು ವಿಶ್ವವಿದ್ಯಾನಿಲಯ, ಇಂಜಿನಿಯರಿಂಗ್ ವಿಭಾಗ, ಮಾನಸಗಂಗೋತ್ರಿ, ಮೈಸೂರು.<br>ಸದರಿ ಮೂರು ಸಂಸ್ಥೆಗಳ ಅಂದಾಜು ಪಟ್ಟಿಯಲ್ಲಿ ನಿರ್ಮಿತಿ ಕೇಂದ್ರದವರು ಕನಿಷ್ಠ ದರವನ್ನು ನಮೂದಿಸಿರುತ್ತಾರೆಂದು ತಿಳಿಸಿದರು.<br>ಡಾ. ನಟರಾಜ್ ಹೆಚ್.ಎಸ್‌ರವರು ಮಾತನಾಡಿ, ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯವು ನಿರ್ಮಿತಿ ಕೇಂದ್ರದ ವತಿಯಿಂದ ನಿರ್ವಹಿಸಲ್ಪಟ್ಟಿರುವ ಕಟ್ಟಡದ ಕಾಮಗಾರಿಯ ಹುಂಡಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧಕರ ಆಕ್ಷೇಪಣೆಯಿರುವುದಾಗಿ ತಿಳಿದು ಬಂದಿರುತ್ತದೆಯೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲಾಗುವುದೆಂದು ತಿಳಿಸಿದರು.<br>ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕೆಟಿಪಿಪಿ ಕಾಯ್ದೆ ಪ್ರಕಾರ ಟೆಂಡರ್ ಆಹ್ವಾನಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಕಾಮಗಾರಿಯನ್ನು ನಿರ್ವಹಿಸಲು ಅವಶ್ಯವಿರುವ ಅನುದಾನವನ್ನು ಯಾವ ಶೀರ್ಷಿಕೆಯಿಂದ ಭರಿಸುವುದು ಎಂಬುದನ್ನು ತುರ್ತಾಗಿ ಪರಿಶೀಲಿಸಿ ಮಾಹಿತಿ ನೀಡುವಂತೆ ಹಣಕಾಸು ಅಧಿಕಾರಿಗಳಿಗೆ ಸೂಚನೆ ನೀಡಿದರು. |
| ತೀರ್ಮಾನ | **ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದೀನದಯಾಳ್ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿರುವ ವಿಶ್ವವಿದ್ಯಾನಿಲಯದ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲು ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಕಾಮಗಾರಿ ನಿರ್ವಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.13 | International School of Management Excellence (ISME), No. 88, ಚೆಂಬನಹಳ್ಳಿ, ದೊಮ್ಮಸಂದ್ರ ಸರ್ಕಲ್ ಹತ್ತಿರ, ಸರ್ಜಾಪುರ ರಸ್ತೆ, ಬೆಂಗಳೂರು ಇವರ ಸಂಸ್ಥೆಯಲ್ಲಿ ಹೆಚ್ಚುವರಿಯಾಗಿ Commerce ವಿಷಯದಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |

| | |
|---|---|
| ತೀರ್ಮಾನ | **International School of Management Excellence (ISME), No. 88, ಚೆಂಬನಹಳ್ಳಿ, ದೊಮ್ಮಸಂದ್ರ ಸರ್ಕಲ್ ಹತ್ತಿರ, ಸರ್ಜಾಪುರ ರಸ್ತೆ, ಬೆಂಗಳೂರು ಇವರ ಸಂಸ್ಥೆಯಲ್ಲಿ ಹೆಚ್ಚುವರಿಯಾಗಿ Commerce ವಿಷಯದಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/6.14 | ಸೃಷ್ಟಿ ಕಾಲೇಜು ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರ ಸಂಸ್ಥೆಯಲ್ಲಿ Law ವಿಷಯದಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಸಂಶೋಧನಾ ಮಾನ್ಯತೆ ನೀಡಿರುವ ಬಗ್ಗೆ- ಅನುಸಮರ್ಥನೆಗಾಗಿ. |
| ತೀರ್ಮಾನ | **ಸೃಷ್ಟಿ ಕಾಲೇಜು ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರ ಸಂಸ್ಥೆಯಲ್ಲಿ Law ವಿಷಯದಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯನುಸಾರ ಸಂಶೋಧನಾ ಮಾನ್ಯತೆ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/6.15 | ಡಾ. ಹೆಚ್.ಸಿ. ದೇವರಾಜೇಗೌಡ, ಪ್ರಾಂಶುಪಾಲರು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯ ವರದಿಯ ಬಗ್ಗೆ. |
| | ಕುಲಸಚಿವರು ಮಾತನಾಡಿ, ಶ್ರೀ ಜೆ. ಶಿವಕುಮಾರ, ಪ್ರಥಮ ದರ್ಜೆ ಸಹಾಯಕರು, ಇವರು ಆತ್ಮಹತ್ಯೆ ಮಾಡಿಕೊಂಡಿದ್ದ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದು, ಸದರಿ ವಿಚಾರಣೆಯಲ್ಲಿ ಡಾ. ಹೆಚ್.ಸಿ. ದೇವರಾಜೇಗೌಡ, ಪ್ರಾಂಶುಪಾಲರು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ವಿಚಾರಣಗೊಳಪಡಿಸಿ, ಯಾವುದೇ ಸಾಕ್ಷ್ಯಾಧಾರಗಳು/ಪುರಾವೆಗಳು ದೊರಕಿಲ್ಲದ ಕಾರಣ ವಿಚಾರಣಾಧಿಕಾರಿಗಳಾದ ಶ್ರೀ ಸಾಬಪ್ಪ ಬಿ. ಮಲೆಗಲ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಇವರು ವಿಚಾರಣೆಯನ್ನು ಪೂರ್ಣಗೊಳಿಸಿ ಗೌಪ್ಯ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದು, ಸದರಿ ವಿಷಯದಲ್ಲಿ ಡಾ. ಹೆಚ್.ಸಿ. ದೇವರಾಜೇಗೌಡ ರವರ ವಿರುದ್ಧ ಯಾವುದೇ ಸಾಕ್ಷ್ಯಗಳು ದೊರಕಿಲ್ಲವಾದ್ದರಿಂದ ಇವರನ್ನು ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲವೆಂದು / ನಿರ್ದೋಷಿಯೆಂದು ಸಾಬೀತಾಗಿರುವುದನ್ನು ಹಾಗೂ ಸದರಿ ವಿಚಾರಣೆಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಅಧಿಕಾರಿಗಳ ಪಾತ್ರವಿಲ್ಲದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ ಹಾಗೂ ವಿಚಾರಣಾಧಿಕಾರಿಗಳು ನೀಡಿರುವ ವರದಿಯನ್ನು ಸಭೆಯಲ್ಲಿ ಮಂಡಿಸಿದರು.<br><br>ಶ್ರೀ ಮಹದೇಶು ರವರು ಮಾತನಾಡುತ್ತಾ, ಸದರಿ ವಿಚಾರಣೆ ಬಗ್ಗೆ ನ್ಯಾಯಾಧೀಶರು ವರದಿಯನ್ನು ನೀಡಿರುವ ವರದಿಯು ನಿರೀಕ್ಷಿತವಾಗಿದ್ದುದರಿಂದ ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡವೆಂದು ತಿಳಿಸುತ್ತಾ, ಯುವರಾಜ ಕಾಲೇಜಿನಲ್ಲಿ ಕಳೆದ 10 ವರ್ಷಗಳಿಂದ ಹಣಕಾಸಿನ ದುರುಪಯೋಗ ನಡೆದಿರುವ ಬಗ್ಗೆ ಅಂದರೆ ಕೇವಲ ಡಾ. ಹೆಚ್.ಸಿ. ದೇವರಾಜೇಗೌಡರವರು ಪ್ರಾಂಶುಪಾಲರಾಗಿದ್ದ ಸಮಯದಲ್ಲದೆ ಹಿಂದೆ ನಡೆದಿರುವಂತಹ ಹಣಕಾಸಿನ ದುರುಪಯೋಗದ ಬಗ್ಗೆಯೂ ಕೂಲಂಕಷವಾದ ಲೆಕ್ಕಪರಿಶೋಧನೆ/ತನಿಖೆಯನ್ನು ನಡೆಸಬೇಕಾಗಿ ಮಾನ್ಯ ಕುಲಪತಿಗಳಲ್ಲಿ ಹಾಗೂ ಕಾರ್ಯದರ್ಶಿಗಳಲ್ಲಿ ಮನವಿಯನ್ನು ಸಲ್ಲಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶ್ರೀ ಮಹದೇಶುರವರು ಹೇಳಿದಂತೆ ತನಿಖೆ/ಲೆಕ್ಕಪರಿಶೋಧನೆ ನಡೆಸುವಂತೆಯೂ ಅದರಲ್ಲಿ ಡಾ. ಹೆಚ್.ಸಿ. ದೇವರಾಜೇಗೌಡ ಹಾಗೂ ದಿ. ಶ್ರೀ ಶಿವಕುಮಾರ ಇವರ ಅವಧಿಯಲ್ಲಿ ನಡೆದಿರುವಂತಹ ಹಣ ದುರುಪಯೋಗದ ಬಗ್ಗೆ ಪ್ರತ್ಯೇಕ ತನಿಖೆ/ಲೆಕ್ಕಪರಿಶೋಧನೆಯನ್ನು ನಡೆಸುವಂತೆ ತಿಳಿಸುತ್ತಾ, ಡಾ. ಹೆಚ್.ಸಿ. ದೇವರಾಜೇಗೌಡರು ಇನ್ನೂ ಕರ್ತವ್ಯದಲ್ಲಿ ಮುಂದುವರೆಯುತ್ತಿರುವುದರಿಂದ ಇವರ ಕಾಲದಲ್ಲೇ ತನಿಖೆ/ ಲೆಕ್ಕಪರಿಶೋಧನೆಯನ್ನು ನಡೆಸಿದಾಗ ಹಣವನ್ನು ಮರುಪಾವತಿ ಮಾಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಸದರಿ ವಿಚಾರಣೆಯೂ ತತ್‌ಕ್ಷಣದಲ್ಲಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಹಾಗೂ 10 ವರ್ಷಗಳಿಂದ ನಡೆದಿರುವಂತಹ ಹಣ ದುರುಪಯೋಗದ ಬಗ್ಗೆಯೂ ಪ್ರತ್ಯೇಕವಾಗಿ ತನಿಖೆ/ಲೆಕ್ಕಪರಿಶೋಧನೆಯಾಗಲಿ ಎಂದು ಸಭೆಗೆ ತಿಳಿಸಿದರು. |

| | |
|---|---|
| | ಶ್ರೀ ಮಹದೇಶು ಅವರು ಮಾತನಾಡಿ, ಕರ್ತವ್ಯ ನಿರ್ವಹಿಸುತ್ತಿದ್ದ ಯಾವುದೇ ಅಧಿಕಾರಿಗಳಾಗಲಿ ಅಥವಾ ಸಿಬ್ಬಂದಿಗಳಾಗಲಿ ಕೋಟಿ-ಕೋಟಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆದರೆ ವಿದ್ಯಾರ್ಥಿಗಳು ಶುಲ್ಕಗಳನ್ನು ಕಾಲೇಜಿಗೆ ಪಾವತಿಸುವಾಗ ಅವರುಗಳ ಹಾಗೂ ಅವರ ತಂದೆ-ತಾಯಿಗಳ ಶ್ರಮದ ಬಗ್ಗೆ ಪ್ರತಿಫಲಬೇಕಲ್ಲವೇ ಎಂದು ಕೇಳಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಪ್ರಸ್ತುತ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿಗಳಿಂದ ಪಾವತಿಸಿಕೊಂಡಿರುವ ಶುಲ್ಕದ ಮಾಹಿತಿಯನ್ನು ಪ್ರತಿ ವರ್ಷ ಲೆಕ್ಕವನ್ನು ನೀಡುವಂತೆ ತಿಳಿಸುತ್ತಾ, ಕಾಲೇಜಿನಲ್ಲಿ ಅಗತ್ಯಕ್ಕಿಂತ ಹೆಚ್ಚಿರುವ ಬ್ಯಾಂಕಿನ ಖಾತೆಗಳನ್ನು ನಿಷ್ಕ್ರಿಯಗೊಳಿಸಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕೆಲವೊಂದು ಸಂದರ್ಭದಲ್ಲಿ ಎನ್‌ಎಸ್‌ಎಸ್ ಅಥವಾ ಯುಜಿಸಿ ಹಾಗೂ ಇತರೆ ವಿಷಯಗಳಿಗಾಗಿ ಬ್ಯಾಂಕಿನಲ್ಲಿ ಖಾತೆಗಳನ್ನು ತೆರೆಯಲಾಗಿತ್ತು, ತತ್‌ಕ್ಷಣದಲ್ಲಿ ಖಾತೆಗಳನ್ನು ರದ್ದುಪಡಿಸಿದರೆ, ಖಾತೆಗಳನ್ನು ಯಾವ ಕಾರಣಕ್ಕಾಗಿ ರದ್ದುಗೊಳಿಸಲಾಗಿದೆ ಎಂದು ಲೆಕ್ಕಪರಿಶೋಧಕರು ಪ್ರಶ್ನಿಸುವುದರಿಂದ, ಅನಗತ್ಯವಾಗಿರುವ ಕೆಲವು ಖಾತೆಗಳನ್ನು ರದ್ದುಪಡಿಸಲಾಗುತ್ತಿದೆ ಎಂದು ತಿಳಿಸಿದರು. |
| ತೀರ್ಮಾನ | **ದಿ. ಶ್ರೀ ಜೆ. ಶಿವಕುಮಾರ, ಪ್ರಥಮ ದರ್ಜೆ ಸಹಾಯಕರು, ಇವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಡಾ. ಹೆಚ್.ಸಿ. ದೇವರಾಜೇಗೌಡ, ಪ್ರಾಂಶುಪಾಲರು, ಮಹಾರಾಜ ಕಾಲೇಜು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯ ವರದಿಯನ್ನು ಸಭೆಯು ಅನುಮೋದಿಸಿತು. ಹಾಗೂ ಡಾ. ಹೆಚ್.ಸಿ. ದೇವರಾಜೇಗೌಡ ಮತ್ತು ದಿ. ಶ್ರೀ ಜೆ. ಶಿವಕುಮಾರ ಇವರುಗಳ ಅವಧಿಯಲ್ಲಿ ಕಾಲೇಜಿನಲ್ಲಿ ನಡೆದಿರುವ ಹಣ ದುರುಪಯೋಗದ ಬಗ್ಗೆ ಹಾಗೂ 10 ವರ್ಷಗಳ ಹಿಂದಿನಿಂದ ನಡೆದಿರುವಂತಹ ಹಣ ದುರುಪಯೋಗದ ಬಗ್ಗೆ ತನಿಖೆ/ಲೆಕ್ಕಪರಿಶೋಧನೆಯನ್ನು ಪ್ರತ್ಯೇಕವಾಗಿ ನಡೆಸುವಂತೆ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/6.16** | Defence Food Research Laboratory (DFRL), ಸಿದ್ಧಾರ್ಥನಗರ, ಮೈಸೂರು ಬದಲಾಗಿ Defence Institute of Biodefence Technologies, ಸಿದ್ಧಾರ್ಥನಗರ, ಮೈಸೂರು ಎಂಬುದಾಗಿ ಸಂಸ್ಥೆಯ ಹೆಸರನ್ನು ಬದಲಾವಣೆ ಮಾಡಿ ಹೊರಡಿಸಿರುವ ಅಧಿಸೂಚನೆಯನ್ನು ಅನುಸಮರ್ಥನೆಗಾಗಿ ಮಂಡಿಸಿರುವ ಬಗೆಗೆ. |
| ತೀರ್ಮಾನ | **Defence Food Research Laboratory (DFRL), ಸಿದ್ಧಾರ್ಥನಗರ, ಮೈಸೂರು ಬದಲಾಗಿ Defence Institute of Biodefence Technologies, ಸಿದ್ಧಾರ್ಥನಗರ, ಮೈಸೂರು ಎಂಬುದಾಗಿ ಸಂಸ್ಥೆಯ ಹೆಸರನ್ನು ಬದಲಾವಣೆ ಮಾಡಿ ಹೊರಡಿಸಿರುವ ಅಧಿಸೂಚನೆಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2025/6.17** | ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ಕೈಗೊಳ್ಳುವ ಸಂಬಂಧ ಅವಶ್ಯವಿರುವ ಐ.ಟಿ. ಪರಿಕರಗಳು ಮತ್ತು ಪೀಠೋಪಕರಣಗಳನ್ನು ಖರೀದಿಸಿ ಅಳವಡಿಸುವ ಬಗೆಗೆ. |
| | ಕುಲಸಚಿವರು (ಪರೀಕ್ಷಾಂಗ) ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ಕೈಗೊಳ್ಳುವ ಸಂಬಂಧ ಅವಶ್ಯವಿರುವ ಐ.ಟಿ. ಪರಿಕರಗಳು ಮತ್ತು ಪೀಠೋಪಕರಣಗಳನ್ನು ಖರೀದಿಸಿ ಅಳವಡಿಸುವ ವಿಷಯವನ್ನು ಅನುಸಮರ್ಥನೆಗಾಗಿ ಮಂಡಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸದರಿ ವಿಷಯದ ಬಗ್ಗೆ ಈಗಾಗಲೇ ಕಾರ್ಯದರ್ಶಿಗಳಾದ ಕುಲಸಚಿವರಿಗೆ 20-25 ದಿವಸಗಳಿಂದ ಪತ್ರ ವ್ಯವಹಾರವನ್ನು ನಡೆಸಲಾಗಿದ್ದು, ಸದರಿ ವಿಷಯದ ಬಗ್ಗೆ ನನ್ನ ಆಕ್ಷೇಪಣೆಯಿದ್ದು, ಸ್ಪಷ್ಟೀಕರಣವನ್ನು ಕೋರಲಾಗಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರಂತೆ ಹಾಗೂ ಕೆಟಿಪಿಪಿ ಕಾಯ್ದೆ ಪ್ರಕಾರ ಒಂಬತ್ತು ಪ್ರಶ್ನೆಗಳನ್ನು ಕೇಳಿದ್ದು, ಅವುಗಳಿಗೆ ಸ್ಪಷ್ಟೀಕರಣವನ್ನು ಹಾಗೂ ಸಂಪೂರ್ಣ ಮಾಹಿತಿಯನ್ನು ಒದಗಿಸಿದ ನಂತರವೇ ಸಿಂಡಿಕೇಟ್‌ಗೆ ಮಂಡಿಸಬೇಕೆಂದು ಕಾರ್ಯದರ್ಶಿಗಳಲ್ಲಿ ಕೇಳಿದರು. |

ಕುಲಸಚಿವರು ಮಾತನಾಡಿ, ಮೌಲ್ಯಭವನಕ್ಕೆ ಐಟಿ ಪರಿಕರಗಳನ್ನು ಮತ್ತು ಪೀಠೋಪಕರಣಗಳನ್ನು ಖರೀದಿಸಿ ಅಳವಡಿಸುವ ಬಗೆಗಿನ ವಿಷಯದ ಬಗ್ಗೆ ಕುಲಸಚಿವರಾದ ನನಗೆ ಯಾವುದೇ ಮಾಹಿತಿಯಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರುತ್ತಾ, ಸದರಿ ವಿಷಯದ ಬಗ್ಗೆ ಕುಲಸಚಿವ (ಪರೀಕ್ಷಾಂಗ) ಮತ್ತು ಇತರೆ ಅಧಿಕಾರಿಗಳಿಂದ ತಾವು ಮಾಹಿತಿಯನ್ನು ಪಡೆಯಬೇಕಾಗುತ್ತದೆ. ಜೊತೆಗೆ ಕುಲಸಚಿವ (ಪರೀಕ್ಷಾಂಗ) ರವರು ಸದರಿ ಟೆಂಡರ್ ಬಗ್ಗೆ ಕುಲಸಚಿವರಾದ ತಮಗೆ ಯಾವುದೇ ಸಂಬಂಧವಿಲ್ಲವೆಂಬ ವಿಷಯವನ್ನು ಸಭೆಯಲ್ಲಿ ತಿಳಿಸಬೇಕೆಂದು ಸಹ ತಿಳಿಸುತ್ತಾ, ಸದರಿ ಟೆಂಡರ್ ಬಗೆಗೆ ಯಾವುದೇ ಒಂದು ಪತ್ರಕ್ಕೂ ಸಹಿ ಮಾಡಿರುವುದಿಲ್ಲವೆಂಬ ಅಂಶವನ್ನು ಸಹ ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕಾರ ಟೆಂಡರ್ ಅಥವಾ ಇನ್ನಿತರೆ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಕುಲಸಚಿವರಿಗೆ ಅಧಿಕಾರವಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿ ಟೆಂಡರ್ ಬಗೆಗೆ ಒಂದೇ ಒಂದು ಮಾಹಿತಿಯು ನನ್ನ ಬಳಿ ಬಂದಿರುವುದಿಲ್ಲ. ಜೊತೆಗೆ ಕುಲಸಚಿವ (ಪರೀಕ್ಷಾಂಗ)ರವರು ಸದರಿ ಟೆಂಡರ್‌ನ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದಾಗಿ ಒಂದು ಪತ್ರವನ್ನು ಬರೆದಿದ್ದರೂ ನನ್ನ ಆಕ್ಷೇಪವಿರುತ್ತಿರಲಿಲ್ಲ. ಆದರೆ ಸದರಿ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇರುವುದರಿಂದ ಕುಲಸಚಿವರ ಹಸ್ತಕ್ಷೇಪ ಇರುವುದಿಲ್ಲವಾದ್ದರಿಂದ ಕುಲಸಚಿವ (ಪರೀಕ್ಷಾಂಗ)ರವರಿಂದಲೇ ಮಾಹಿತಿಯನ್ನು ಪಡೆಯ ಬೇಕಾಗುತ್ತದೆ ಎಂದು ಸಭೆಗೆ ತಿಳಿಸುತ್ತಾ, ಯಾವ GEM ಪೋರ್ಟಲ್‌ನಿಂದ ಟೆಂಡರ್ ಆಹ್ವಾನಿಸಿದ್ದಾರೆಂಬ ಬಗ್ಗೆಯೂ ಇದುವರೆಗೂ ಮಾಹಿತಿಯಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಟೆಂಡರ್‌ಗೂ ಕುಲಸಚಿವರಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳುವುದಾದರೆ ಇದೇ ನಡಾವಳಿಯಲ್ಲಿ ದಾಖಲಾಗಬೇಕೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, GEM ಪೋರ್ಟಲ್‌ನ ಕೀ ತಮ್ಮ ಬಳಿಯೇ ಇರಬೇಕಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, GEM ಪೋರ್ಟಲ್‌ನ ಕೀಯು ವಿಶ್ವವಿದ್ಯಾನಿಲಯದ ಗೆಜೆಟ್ ಅಧಿಕಾರಿಗಳಲ್ಲಿ ಇರುತ್ತದೆ. ಹಾಗೆಯೇ 2-3ನೇ ಸಿಂಡಿಕೇಟ್ ನಡೆದಂತಹ ಸಂದರ್ಭದಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಕೆಲವು ಬದಲಾವಣೆಗಳನ್ನು ತರಬೇಕಾಗಿರುವುದರಿಂದ ಪರೀಕ್ಷಾ ಕಾರ್ಯಗಳನ್ನು ಡಿಜಿಟಲೀಕರಣಗೊಳಿಸುವ ಹಾಗೂ ಡಿಜಿಟಲ್ ಮೌಲ್ಯಮಾಪನವನ್ನು ನಡೆಸುವ ನಿಟ್ಟಿನಲ್ಲಿ ಸದರಿ ಟೆಂಡರ್‌ಅನ್ನು ಕರೆಯಲಾಗಿದೆ. ಕುಲಸಚಿವ (ಪರೀಕ್ಷಾಂಗ)ರವರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಟೆಂಡರ್‌ಅನ್ನು 2019 ರಿಂದಲೂ ಹಾಗೂ 2019ರ ಹಿಂದಿನಿಂದಲೂ ಕರೆದಿರುತ್ತಾರೆ. ಆದ್ದರಿಂದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ವಿಷಯವಾಗಿದ್ದುದರಿಂದ ಸದರಿ ಟೆಂಡರ್‌ಅನ್ನು ಕುಲಸಚಿವ (ಪರೀಕ್ಷಾಂಗ)ರವರು ಕರೆದಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಟೆಂಡರ್‌ನ ಮೊತ್ತವು ರೂ. 5.00 ಕೋಟಿ ಮೊತ್ತದ ಹಣವಾಗಿರುವುದರಿಂದ ಸದರಿ ವಿಷಯವು ಕುಲಸಚಿವರ ಗಮನಕ್ಕೆ ಬರಬೇಕಾಗಿತ್ತು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಟೆಂಡರ್ ಕರೆದಿರುವುದು ತಪ್ಪಲ್ಲ, ಆದರೆ ಕುಲಸಚಿವ (ಪರೀಕ್ಷಾಂಗ)ರವರಾಗಲಿ, ಕುಲಸಚಿವರಾಗಲಿ, ಕಾರ್ಯಪಾಲಕ ಅಭಿಯಂತರರು ಅಥವಾ ಇತರೇ ಯಾವುದೇ ಅಧಿಕಾರಿಗಳು ಯಾವ ಯಾವ ಟೆಂಡರ್‌ನ್ನು ಕರೆಯಬಹುದೆಂಬುದರ ಬಗ್ಗೆ ಅವರವರ ಕಾರ್ಯವ್ಯಾಪ್ತಿ ನಿರ್ಧಾರವಾಗಬೇಕೆಂದು ಸಭೆಗೆ ತಿಳಿಸುತ್ತಾ, ಸುಮಾರು 9 ತಿಂಗಳಿನಿಂದ ಕೆರಿಯರ್ ಹಬ್‌ನಲ್ಲಿ ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗಾಗಿ ಯಾವುದೇ ಕಾರ್ಯಕ್ರಮವು ಆಯೋಜನೆಯಾಗಿರುವುದಿಲ್ಲವೆಂದು ತಿಳಿಸುತ್ತಾ, ಆಯಾಯ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂರು ತಿಂಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಲಾಗಿತ್ತು. ರೂ. 50.00 ಲಕ್ಷಕ್ಕೆ ಟೆಂಡರ್‌ಅನ್ನು ಕರೆಯಲಾಗಿತ್ತು, ಆದರೆ ಆ ಸಂದರ್ಭದಲ್ಲಿ ಯಾವ ಕಾರಣವನ್ನು ನೀಡಿ ಸದರಿ ಟೆಂಡರ್‌ಅನ್ನು ರದ್ದುಗೊಳಿಸಲಾಗಿತ್ತು ಎಂಬ

ಅಂಶವನ್ನು ಸಭೆಯ ಗಮನಕ್ಕೆ ತರಬೇಕೆಂದು ತಿಳಿಸಿದರು. ಆದರೆ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ರೂ. 4.50 ಕೋಟಿಗಳ ಟೆಂಡರ್‌ಅನ್ನು ಕರೆದಿದ್ದೀರಾ. ಇದು ಯಾವ ರೀತಿ ಸಾಧ್ಯವೆಂದು ಕೇಳುತ್ತಾ, ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದು ವಿದ್ಯಾರ್ಥಿಗಳ ಒಳಿತಿಗಾಗಿ. ಕೆರಿಯರ್ ಹಬ್ ನಿರ್ಮಾಣವಾಗಿರುವುದು ವಿದ್ಯಾರ್ಥಿಗಳ ಜೀವನವನ್ನು ರೂಪಿಸುವುದಕ್ಕಾಗಿ. ಆದರೆ ಆರ್ಥಿಕ ಸಂದಿಗ್ಧತೆ ಇರುವ ಈ ಸಂದರ್ಭದಲ್ಲಿ ರೂ. 4.50 ಕೋಟಿಗಳ ದೊಡ್ಡ ಮೊತ್ತದ ಟೆಂಡರ್‌ಅನ್ನು ಕರೆಯುವಾಗ ಒಂದು ಸಭೆಯನ್ನು ಕರೆಯದೆ, ಕುಲಸಚಿವರ ಗಮನಕ್ಕೆ ತಾರದೆ ಟೆಂಡರನ್ನು ಕರೆದಿರುವುದು ಆಕ್ಷೇಪಣೀಯವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆ ನಡೆದಂತಹ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿತ್ತು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಹಿಂದೆ ನಡೆದಿರುವಂತಹ ಸಿಂಡಿಕೇಟ್ ಸಭೆಯಲ್ಲಿ ಟೆಂಡರ್ ಕರೆಯುವ ಬಗ್ಗೆ ಯಾವುದೇ ವಿಷಯವನ್ನು ಮಂಡಿಸಲಾಗಿರುವುದಿಲ್ಲ. ಯಾವುದೋ ಪರೀಕ್ಷಾ ವಿಭಾಗದ ವಿಷಯವು ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ವಿಷಯವನ್ನು ಚರ್ಚಿಸಲಾಗಿದೆ. ಕುಲಸಚಿವ (ಪರೀಕ್ಷಾಂಗ) ಅವರು ಪರೀಕ್ಷಾ ಕಾರ್ಯದಲ್ಲಿ ಕೆಲವೊಂದು ಸುಧಾರಣೆಗಳನ್ನು ಮಾಡಿದ್ದಲ್ಲಿ ಪರೀಕ್ಷಾ ಕಾರ್ಯಗಳನ್ನು ಸುಲಲಿತಗೊಳಿಸಬಹುದೆಂದು ತಿಳಿಸಿದ್ದರು. ಅದರೆ ಸದರಿ ವಿಷಯದ ಬಗ್ಗೆ ಯಾವುದೇ ತೀರ್ಮಾನವಾಗಿರುವುದಿಲ್ಲವೆಂದು ತಿಳಿಸಿದರು. ಕುಡಿಯುವ ನೀರಿನ ವ್ಯವಸ್ಥೆಗೆ ಹಾಗೂ ಸಂಭಾವನೆ ನೀಡಲು ಹಣಕಾಸು ನೀಡಲು ಸಾಧ್ಯವಾಗದೆ ಇರುವ ಸಂದರ್ಭದಲ್ಲಿ, ಹಣಕಾಸಿನ ಯಾವ ಶೀರ್ಷಿಕೆಯಡಿ ಈ ಟೆಂಡರ್‌ಅನ್ನು ಕರೆದಿದ್ದೀರಿ. ರೂ. 4.50ಕೋಟಿ ಮೌಲ್ಯದ ಉಪಕರಣಗಳನ್ನು ಅಳವಡಿಸಲು ಅತ್ಯಗತ್ಯವಿತ್ತೇ, ಸದರಿ ವಿಷಯವು ಅತ್ಯಗತ್ಯವಿದಲ್ಲಿ ಖಂಡಿತವಾಗಿಯೂ ಈ ಪ್ರಕ್ರಿಯೆಯನ್ನು ನಡೆಸಿ, ಆದರೆ ಸದರಿ ವಿಷಯದ ಬಗ್ಗೆ ಚರ್ಚಿಸಬಹುದಿತ್ತಲ್ಲವೇ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ನಡೆಸಲು ಪರಿಕರಗಳು ಮತ್ತು ಪೀಠೋಪಕರಣಗಳನ್ನು ಖರೀದಿಸುವ ಸಂಬಂಧ ಈಗಾಗಲೇ ಹಲವು ಬಾರಿ ಸಿಂಡಿಕೇಟ್ ಸಭೆಗಳಲ್ಲಿ ಚರ್ಚಿಸಲಾಗಿದೆ. ಜೊತೆಗೆ ಐಕ್ಯೂಎಸಿ ಸಭೆಗಳಲ್ಲಿ ಮತ್ತು ನ್ಯಾಕ್ ಬಂದಂತ ಸಂದರ್ಭದಲ್ಲಿ ಚರ್ಚಿತವಾಗಿರುವುದರಿಂದ ಸದರಿ ಪ್ರಕ್ರಿಯೆಯನ್ನು ನಡೆಸಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿ ಟೆಂಡರ್ ಪ್ರಕ್ರಿಯೆಯು ಮೂರು ತಿಂಗಳಿನಿಂದ ನಡೆಯುತ್ತಾ ಇದೆ. ಆದರೆ ಮಾಹಿತಿಗಾಗಿ ಎಂದು ಕುಲಸಚಿವರಾದ ನನ್ನ ಗಮನಕ್ಕೆ ಒಂದು ಪತ್ರದ ಮುಖಾಂತರವಾದರೂ ವಿಷಯವನ್ನು ಗಮನಕ್ಕೆ ತರಬಹುದಿತ್ತಲ್ಲವೇ ಎಂದು ತಿಳಿಸುತ್ತಾ, ರೂ. 50.00 ಲಕ್ಷದ ಟೆಂಡರ್‌ಅನ್ನು ಕರೆಯದೆ ರದ್ದುಗೊಳಿಸಿದ್ದು ಯಾವ ಕಾರಣಕ್ಕಾಗಿ ಎಂಬುದನ್ನು ಸಭೆಯ ಗಮನಕ್ಕೆ ತರಬೇಕೆಂದು ಕುಲಸಚಿವ (ಪರೀಕ್ಷಾಂಗ)ರವರಲ್ಲಿ ಆಗ್ರಹಿಸುತ್ತಾ, ಕೆರಿಯರ್ ಹಬ್‌ನಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಆಯೋಜಿಸುವುದು ಬೇಡವೇ? ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತರಬೇತಿಯನ್ನು ನೀಡಬಾರದೇ? ಹಾಗೆಯೇ ಸರ್ಕಾರದಿಂದ ಬಂದಿರುವಂತಹ ಹಣವನ್ನು ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಕಾರ್ಯಗತರಾಗಬೇಕಾಗುತ್ತದೆ. ರೂಸಾ ಫಂಡ್‌ಅನ್ನು ನಿರ್ವಹಿಸುತ್ತಿರುವುದು ಪಿಎಂಇಬಿ ವಿಭಾಗ, ನಿಮ್ಮ ವಿಭಾಗದಿಂದ ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತಿದ್ದೀರಿ. ರೂಸಾ ನಿಧಿ ರೂ. 8.00 ಕೋಟಿಗಳದ್ದು ಅದರಿಂದನೇ ಸಮ್ಮೇಳನವನ್ನು ಆಯೋಜಿಸಬಹುದಿತ್ತಲ್ಲವೇ? ರೂ. 50.00 ಲಕ್ಷವನ್ನು ತರಬೇತಿಗೆ ನೀಡಲು ತಾಂತ್ರಿಕ ಸಮಿತಿಯಿಂದ ಆಕ್ಷೇಪಣೆ ಎಂದು ತಿಳಿಸಿರುತ್ತೀರಿ. ಆ ಸಮಿತಿಯಲ್ಲಿ ಯಾವ್ಯಾವ ಸದಸ್ಯರಿದ್ದಾರೆ. ಅವರು ನಿಪುಣರೇ, ಯಾವುದೇ ಒಂದು ಟೆಂಡರ್‌ಅನ್ನು ಕರೆಯುವಾಗ ತಾಂತ್ರಿಕ ಸಮಿತಿಯು ವಿಷಯಕ್ಕನುಗುಣವಾಗಿ ಹೊಸದಾಗಿ ತಾಂತ್ರಿಕ ಸಮಿತಿಯನ್ನು ರಚಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಥವಾ ಶೈಕ್ಷಣಿಕ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ರೂ. 4.50 ಕೋಟಿ ಅಲ್ಲದೆ ರೂ. 10.00 ಕೋಟಿಗಳನ್ನಾದರೂ ತೆಗೆದುಕೊಳ್ಳಿ, ಆದರೆ ಯಾವ ಕಾರಣಕ್ಕಾಗಿ ರೂ. 50.00 ಲಕ್ಷಗಳನ್ನು ತಡೆಹಿಡಿದಿರುವುದಕ್ಕೆ ಕಾರಣವನ್ನು ತಕ್ಷಣವೇ ನೀಡಬೇಕೆಂದು ತಿಳಿಸಿದರು. ಕೆರಿಯರ್ ಹಬ್‌ನಲ್ಲಿ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮವನ್ನು ಆಯೋಜಿಸ ಬೇಕಾಗಿರುವುದರಿಂದ ರೂ. 3.00 ಲಕ್ಷಗಳ ಹಣವನ್ನು ವಿಶ್ವವಿದ್ಯಾನಿಲಯದಿಂದ ನೀಡಲು ಸಾಧ್ಯವಾಗುವುದೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ರೂಸಾ ಫಂಡ್‌ನಿಂದ ರೂ. 8.00 ಕೋಟಿಗಳ ಹಣ ಬಂದಿರುವುದಿಲ್ಲ. 2024ನೇ ನವೆಂಬರ್, ಡಿಸೆಂಬರ್ ಹಾಗೂ ಜನವರಿ 2025ರಲ್ಲಿ ಮಾಡಿದ ಕಾರ್ಯಕ್ರಮಗಳ ಮೊತ್ತ ರೂ. 1.00 ಕೋಟಿಗಿಂತ ಹೆಚ್ಚಿನ ಹಣದ ಹುಂಡಿಯು ತಿರಸ್ಕರಿಸಲ್ಪಟ್ಟಿದೆ. ಕೆಎಸ್‌ಹೆಚ್‌ಇಸಿ ನಿಂದ ಹಣ ಬಿಡುಗಡೆಯಾಗಿರುವುದಿಲ್ಲ. ಕಾರಣ ಅಲ್ಲಿಯೂ ಹಣದ ಕೊರತೆಯಿರುವುದು. ಕಾರ್ಯಕ್ರಮಕ್ಕೆ ಬಂದಂತ ಸಂಪನ್ಮೂಲ ವ್ಯಕ್ತಿಯು ಹಣ ಇನ್ನು ಸಂದಾಯವಾಗಿಲ್ಲವೆಂದು ಕೇಳುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ಕಾರ್ಯಕ್ರಮವನ್ನು ಆಯೋಜಿಸಬಹುದು. ಆದರೆ ಸರ್ಕಾರದ ವತಿಯಿಂದ ರೂಸಾ ಹಣ ಬಿಡುಗಡೆಯಾಗುತ್ತದೆ ಎಂದು ಖಾತ್ರಿಯಾದರೆ ಕಾರ್ಯಕ್ರಮವನ್ನು ಆಯೋಜಿಸಬಹುದು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ರೂಸಾ ನಿಧಿಯ ಮೊತ್ತವು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಬರುವುದಿಲ್ಲ. ಹುಂಡಿಯನ್ನು ನೀಡಿದ ನಂತರ ಅವರುಗಳ ಖಾತೆಗೆ ಹೋಗುತ್ತದೆ ಎಂದು ತಿಳಿಸುತ್ತಾ, ರೂ.50.00 ಲಕ್ಷ ಹಣವನ್ನು ತರಬೇತಿ ಕಾರ್ಯಕ್ರಮಕ್ಕೆ ನೀಡಲು ಯಾವ ಕಾರಣದಿಂದ ತಾಂತ್ರಿಕ ಸಮಿತಿಯು ತಿರಸ್ಕರಿಸಿತು ಎಂಬುದನ್ನು ಸಭೆಯ ಗಮನಕ್ಕೆ ತರಬೇಕೆಂದು ಹಾಗೂ ಆ ಸಮಯದಲ್ಲೇ ವಿಷಯವನ್ನು ನನಗೆ ತಿಳಿಸಿದ್ದರೆ ತಾಂತ್ರಿಕ ಸಮಿತಿಯವರಿಗೆ ತರಬೇತಿಯ ಬಗ್ಗೆ ಮನದಟ್ಟು ಮಾಡಿಕೊಡುತ್ತಿದ್ದೆ ಎಂದು ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ದೀರ್ಘವಾಗಿ ಚರ್ಚೆ ನಡೆಯಿತು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಈ ಹಿಂದೆ ಕುಲಸಚಿವರ ಜೊತೆಯಲ್ಲಿ ಕೆರಿಯರ್ ಹಬ್‌ನಿಂದ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ತರಬೇತಿ ನಡೆಸುವಂತೆಯೂ ಚರ್ಚಿಸಲಾಗಿತ್ತು. ಅದರಂತೆಯೇ ಕುಲಸಚಿವರು ಕೆರಿಯರ್ ಹಬ್‌ನಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಿರುವುದಾಗಿ ತಿಳಿಸಿದ್ದರು. ಆದರೆ ಯಾವ ಕಾರಣಕ್ಕಾಗಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ತಡೆಹಿಡಿಯಲಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದರು.

ಕುಲಸಚಿವರು ಮಾತನಾಡಿ, ಪರೀಕ್ಷಾ ವಿಭಾಗದಲ್ಲಿನ ಉತ್ತರ ಪತ್ರಿಕೆ ಹಾಗೂ ಪ್ರಶ್ನೆ ಪತ್ರಿಕೆಗಳಿಗೆ ಸಂಬಂಧಿಸಿದ ಇತರೆ ಕಾರ್ಯಗಳನ್ನು ಕುಲಸಚಿವ (ಪರೀಕ್ಷಾಂಗ) ವಿಭಾಗ, ಮತ್ತೀತರೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ರಕ್ರಿಯೆಯು ಆಡಳಿತ ವಿಭಾಗಕ್ಕೆ ಸಂಬಂಧಿಸಿದ್ದುದಾಗಿರುತ್ತದೆ. ಆದ್ದರಿಂದ ಮುಂದೆ ಯಾವುದೇ ಟೆಂಡರ್‌ಅನ್ನು ಕರೆಯಬೇಕಾಗಿದ್ದಲ್ಲಿ ಆಡಳಿತ ವಿಭಾಗದಿಂದಾಗಬೇಕು. ಇಲ್ಲವಾದಲ್ಲಿ ಸದರಿ ವಿಷಯವು ತಮ್ಮ ವ್ಯಾಪ್ತಿಗೆ ಬರುವುದಾದಲ್ಲಿ ಆಡಿಟ್ ಆಕ್ಷೇಪಣೆಗಳಿಗೆ ಮತ್ತು ಸರ್ಕಾರಕ್ಕೆ ತಾವೇ ಉತ್ತರವನ್ನು ನೀಡಬೇಕಾಗುತ್ತದೆ. ಹಾಗೆಯೇ ಕುಲಸಚಿವರಿಗೆ, ಕುಲಸಚಿವ (ಪರೀಕ್ಷಾಂಗ), ಹಣಕಾಸು ಅಧಿಕಾರಿಗಳ ಕಾರ್ಯವ್ಯಾಪ್ತಿಯನ್ನು ತಿಳಿಸಿದರೆ ಅದರಂತೆ ಕಾರ್ಯನಿರ್ವಹಿಸ ಬಹುದೆಂದು ತಿಳಿಸುತ್ತಾ, ಸದರಿ ವಿಷಯದ ಬಗೆಗೆ ದೀರ್ಘವಾಗಿ ಚರ್ಚೆ ನಡೆಯಿತು.

ಮುಂದುವರೆದು, ಕುಲಸಚಿವರು ಮಾತನಾಡಿ, ಕೆರಿಯರ್ ಹಬ್‌ನಲ್ಲಿ ಎರಡು ತಿಂಗಳಿಗೊಮ್ಮೆ ಒಂದು ಕಾರ್ಯಕ್ರಮವಾದರೂ ನಡೆಯಬೇಕೆಂದು ತಿಳಿಸುತ್ತಾ, ಮೌಲ್ಯಭವನಕ್ಕೆ ಸಂಬಂಧಿಸಿದ ಟೆಂಡರ್‌ನಲ್ಲಿ ನನ್ನ ಪಾತ್ರ ಏನೂ ಇರುವುದಿಲ್ಲ. ಇದಕ್ಕೆ ಟೆಂಡರ್‌ಗೆ ಸಂಬಂಧಿಸಿದಂತೆ ಕುಲಸಚಿವ (ಪರೀಕ್ಷಾಂಗ) ರವರು ಮಾಹಿತಿ ನೀಡಬೇಕು ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ. ಜೊತೆಗೆ ರೂ. 5.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ್ದಾದರೆ ಕೊಟೇಷನ್ ಕರೆಯದೇ ಆನ್‌ಲೈನ್ ಮುಖಾಂತರ Expression of Interest ಟೆಂಡರ್‌ಅನ್ನು ಕರೆಯಬೇಕಾಗುತ್ತದೆ ಎಂದು ತಿಳಿಸುತ್ತಾ, ಹಾಗೇನಾದರೂ ರೂ. 5.00 ಕೋಟಿ ಟೆಂಡರ್‌ಗಳಿಗೆ ಕೊಟೇಷನ್ ಮೂಲಕ ಟೆಂಡರ್ ಮಾಡಿದ್ದರೆ ತಪ್ಪಾಗುತ್ತದೆ ಎಂದು ಮನವರಿಕೆ ಮಾಡಿದರು.

ಶ್ರೀ ಸಿ. ನಾಗರಾಜು ಅವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಯಾವುದೇ ಕೆಲಸವನ್ನು ಮಾಡಬೇಕಾದರೆ ಕಾನೂನಾತ್ಮಕವಾಗಿ ಹಾಗೂ ಕುಲಸಚಿವರ ಗಮನಕ್ಕೆ ತಂದು ಪ್ರಕ್ರಿಯೆಗಳನ್ನು ಮಾಡುವುದು ಒಳಿತೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಕುಲಸಚಿವ (ಪರೀಕ್ಷಾಂಗ)ದವರೇ ಟೆಂಡರ್ ಪ್ರಕ್ರಿಯೆಯನ್ನು ನಡೆಸುವಂತಿದ್ದರೆ ನಡೆಸಲಿ, ಆದರೆ ಇನ್ನುಳಿದ ಅಧಿಕಾರಿ ವರ್ಗದವರಿಗೂ ಸದರಿ ವಿಷಯಗಳ ಬಗ್ಗೆ ಮಾಹಿತಿ ಇರಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಟಿ.ಆರ್. ಚಂದ್ರಶೇಖರ್ ಅವರು ವಿಶ್ವವಿದ್ಯಾನಿಲಯದಿಂದ ಯಾವುದೇ ದಾಖಲೆಯನ್ನು ಪಡೆಯದೇ ಪತ್ರಿಕಾ ಮಾಧ್ಯಮದಲ್ಲಿ ಹೇಳಿಕೆಯನ್ನು ನೀಡುತ್ತಿರುವುದು ಸರಿಯಲ್ಲವೆಂದು ತಿಳಿಸಿದರು. ಹಾಗೆಯೇ ತಮಗೆ ಯಾವುದೇ ಮಾಹಿತಿಗಳು ಬೇಕಾದಲ್ಲಿ ನಮ್ಮ ಅಧಿಕಾರವರ್ಗದವರನ್ನು ಕೇಳಿ, ಅವರುಗಳು ನೀಡದೇ ಇದ್ದಂತಹ ಪಕ್ಷದಲ್ಲಿ ಮಾಧ್ಯಮಕ್ಕೆ ಹೋಗಬಹುದು. ಆದರೆ ವ್ಯಕ್ತಿಗತವಾಗಿ ನೀವು ಆರೋಪವನ್ನು ಮಾಡಿ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆಯನ್ನು ಉಂಟು ಮಾಡಬೇಡಿ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಟೆಂಡರ್ ವಿಷಯವಾಗಿ 20-25 ದಿನಗಳ ಹಿಂದೆ ಪತ್ರ ಬರೆದಿದ್ದು, ಇದುವರೆಗೂ ನಾನು ಕೇಳಿರುವ 9 ಪ್ರಶ್ನೆಗಳಿಗೆ ದಾಖಲಾತಿಗಳನ್ನು ನೀಡಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಿಮಗೆ ವಿಶ್ವವಿದ್ಯಾನಿಲಯದಿಂದ ಪತ್ರ ಬರೆದು, ವಿಶ್ವವಿದ್ಯಾನಿಲಯಕ್ಕೆ ಬಂದು ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಬಹುದೆಂದು ತಿಳಿಸಲಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ನೀವು ಪತ್ರಿಕಾ ಹೇಳಿಕೆಯನ್ನು ನೀಡುವಾಗ, ಯಾವ ಅವಧಿಯಲ್ಲಿ ಯಾವ ಕುಲಪತಿಗಳು/ಕುಲಸಚಿವರು ಎಂಬುದನ್ನು ಸ್ಪಷ್ಟವಾಗಿ ಮಾಹಿತಿಯನ್ನು ನೀಡಬೇಕೆಂದು ತಿಳಿಸುತ್ತಾ, ಹಾಗೂ ತಾವು ರಾತ್ರಿಯಲ್ಲಿ ಮಿಂಚಂಚೆ ಮೂಲಕ ಕಳುಹಿಸುವ ಪತ್ರ ಹಾಗೂ ರಜಾ ದಿನಗಳಲ್ಲಿ ಕಳುಹಿಸುವ ಪತ್ರಕ್ಕೆ ತಕ್ಷಣವೇ ಉತ್ತರ ದೊರಕಬೇಕೆಂದಾದಲ್ಲಿ ಹೇಗೇ ಸಾಧ್ಯ. ತಾವು ಸಮಯಾವಕಾಶವನ್ನು ನೀಡಬೇಕಾಗುತ್ತದೆ. ಜೊತೆಗೆ ನಾವು ತಮ್ಮ ಪತ್ರಕ್ಕೆ ಉತ್ತರಿಸದೆ ಇದ್ದಲ್ಲಿ ನೀವು ಮುಂದಿನ ಕ್ರಮ ತೆಗೆದುಕೊಳ್ಳಬಹುದು. ವಿಶ್ವವಿದ್ಯಾನಿಲಯದಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತೆ ಕೆಲವೊಂದು ವಿಷಯಗಳನ್ನು ನಡೆಸಿಕೊಂಡು ಬಂದಿರುತ್ತಾರೆ. ಅದರಂತೆಯೇ ಈ ಬಾರಿಯೂ ಟೆಂಡರ್‌ಅನ್ನು ಕರೆದಿರುವುದಾದರೆ, ಅದರಂತೆ ನಡೆಯಲಿ. ಇದಕ್ಕಾಗಿ ನೀವು ಅವರಲ್ಲೇ ಪ್ರಶ್ನೆಯನ್ನು ಕೇಳಬೇಕಾಗುತ್ತದೆ ಎಂದು ಡಾ. ಟಿ.ಆರ್. ಚಂದ್ರಶೇಖರ್ ಅವರಿಗೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಡಾ. ಟಿ.ಆರ್. ಚಂದ್ರಶೇಖರ್ ಅವರು ಬರೆದಿರುವ ಪತ್ರವು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಾದ ಮನು ರವರು ತಮ್ಮ Whatsapp ನಲ್ಲಿ ಹಾಕಿಕೊಂಡಿರುತ್ತಾರೆ. ಇದು ಹೇಗೆ ಸಾಧ್ಯ ಎಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಯಾವುದೇ ಸಿಬ್ಬಂದಿ ವಿಶ್ವವಿದ್ಯಾನಿಲಯಕ್ಕೆ ಬರೆದಿರುವ ಪತ್ರವನ್ನು Whatsapp ನಲ್ಲಿ ಹಾಕಿಕೊಳ್ಳಲು ಆಸ್ಪದವಿದೆಯೇ, ಇಲ್ಲವಾದಲ್ಲಿ ಅವರ ವಿರುದ್ಧ ಕ್ರಮಕೈಗೊಳ್ಳಿ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಸಿಂಡಿಕೇಟ್ ಸದಸ್ಯರು ಬರೆದಿರುವ ಪತ್ರವನ್ನು ತನ್ನ ವಾಟ್ಸ್‌ಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡಿರುವುದರಿಂದ ಶ್ರೀ ಮನು ಅವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು. ಜೊತೆಗೆ ಡಾ. ಟಿ.ಆರ್. ಚಂದ್ರಶೇಖರ್ ಅವರು ವಿಶ್ವವಿದ್ಯಾನಿಲಯದಿಂದ ದಾಖಲೆಗಳನ್ನು ಪಡೆಯಲು ಹಲವಾರು ಪತ್ರಗಳನ್ನು ವ್ಯವಹರಿಸಿದ್ದೀರಿ. ಆದರೆ ಯಾವುದೋ ಒಂದು ಮಾತಿನಿಂದ ಆ ಪತ್ರಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಿಶ್ವವಿದ್ಯಾನಿಲಯದಿಂದ ಪಡೆಯಲಿಲ್ಲ. ಇದಕ್ಕೆ ನೀವು ನಿಮ್ಮ ನಿರ್ಧಾರದಲ್ಲಿ ಗಟ್ಟಿತನವಿರುವುದಿಲ್ಲವೆಂದು ತಿಳಿಸುತ್ತಾ, ನೀವು ವಿಶ್ವವಿದ್ಯಾನಿಲಯದಿಂದ ದಾಖಲೆಗಳನ್ನು ಪತ್ರಗಳನ್ನು ಪಡೆಯಲು ನಿಮಗೆ ಅಧಿಕಾರವಿದೆ, ಹಾಗೆಯೇ ನಮ್ಮ ಸಹಮತವೂ ಸಹ ಇದೆ. ಆದರೆ ನೀವು ನೇರವಾಗಿ ಪತ್ರಿಕಾ ಮಾಧ್ಯಮಕ್ಕೆ ಹೋಗಿ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಉಂಟುಮಾಡುವುದು ಸರಿಯಲ್ಲವೆಂದು ತಿಳಿಸಿದರು. ಸದರಿ ವಿಷಯಕ್ಕೆ ಇತರ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಪತ್ರಿಕಾ ಮಾಧ್ಯಮಕ್ಕೆ ಹೇಳಿಕೆ ನೀಡಲು ನನಗೆ ವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ತಿಳಿಸಿದರು. ಯಾರೇ ಏನೇ ಪ್ರಶ್ನೆ ಮಾಡುವುದಾದರೆ ಅಧ್ಯಕ್ಷರು/ಸದಸ್ಯ ಕಾರ್ಯದರ್ಶಿಗಳಿಗೆ ಹೇಳಬಹುದು. ಆದರೆ ನನಗೆ ನೇರವಾಗಿ ಹೇಳುವಂತಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ಮಾತನಾಡಬೇಕಾದಲ್ಲಿ ಸದಸ್ಯರುಗಳೇ ನೇರನೇರವಾಗಿ ಮಾತನಾಡುವಂತಿಲ್ಲ. ಅಧ್ಯಕ್ಷರ/ಸದಸ್ಯ ಕಾರ್ಯದರ್ಶಿಗಳ ಮುಖಾಂತರ ಮಾತನಾಡಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಯಾವುದೇ ಮಾಹಿತಿ, ದಾಖಲೆಗಳು ದೊರಕದಿದ್ದಲ್ಲಿ ನೇರವಾಗಿ ಪತ್ರಿಕಾ ಹೇಳಿಕೆಯನ್ನು ನೀಡುವ ಮೊದಲು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತಂದು ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವ (ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಸಮ್ಮುಖದಲ್ಲಿ ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂದು ಅಧ್ಯಕ್ಷರ ಮುಖಾಂತರ ಡಾ. ಟಿ.ಆರ್. ಚಂದ್ರಶೇಖರ್ ಅವರಿಗೆ ತಿಳಿಸಿದರು.

ಕುಲಸಚಿವರು ಮಾತನಾಡಿ, ಮಾನ್ಯ ಕುಲಪತಿಗಳು ಇಲ್ಲದಿದ್ದಾಗ್ಯೂ ವಿಶ್ವವಿದ್ಯಾನಿಲಯದ ಆಡಳಿತದ ಮೇಲೆ ಯಾವುದೇ ಗುರುತರವಾದ ಆಪಾದನೆಗಳಿದ್ದಲ್ಲಿ ಸಕ್ಷಮ ಪ್ರಾಧಿಕಾರದ ಮುಂದೆ ದೂರನ್ನು ಸಲ್ಲಿಸಬಹುದೆಂದು ಡಾ. ಟಿ.ಆರ್. ಚಂದ್ರಶೇಖರ್ ಅವರು ಬರೆದ ಪತ್ರಕ್ಕೆ ಉತ್ತರವನ್ನು ನೀಡಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಕೆಲಸವನ್ನು ಮಾಡಬೇಕಾದರೂ ಅದಕ್ಕೆ ಪರಿಮಿತಿ ನಿಯಮಗಳ ಅನುಸಾರವಾಗಿ ಮಾಡಬೇಕಾಗುತ್ತದೆ. ಸಿಂಡಿಕೇಟ್ ಸದಸ್ಯರುಗಳಾದ ನಿಮಗೆ ಯಾವುದೇ ದಾಖಲೆ/ಮಾಹಿತಿ ಬೇಕಾದಲ್ಲಿ ನೇರವಾಗಿ ಬಂದು ನನ್ನನ್ನು ಕಂಡು ಮಾಹಿತಿಯನ್ನು ಪಡೆಯಬಹುದು. ಆದರೆ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತರುವಂತಹ ಕೆಲಸವನ್ನು ಮಾಡಬೇಡಿ ಎಂದು ತಿಳಿಸುತ್ತಾ, ಸದರಿ ಟೆಂಡರ್ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ದೀರ್ಘವಾಗಿ ಚರ್ಚೆ ನಡೆಯಿತು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಯಾವುದೇ ಟೆಂಡರ್, ನೇಮಕಾತಿಗೆ ಸಂಬಂಧಿಸಿದ ವಿಷಯಗಳ ದಾಖಲೆ ಹಾಗೂ ಮಾಹಿತಿಗಳನ್ನು ಆಯಾಯ ವಿಭಾಗಗಳಿಂದ ಪಡೆಯಬಹುದು. ಸದರಿ ವಿಷಯವನ್ನು ಅನುಸಮರ್ಥನೆಗಾಗಿ ಮಂಡಿಸಿರುವ ವಿಷಯವಾಗಿರ ಬಹುದು. ಇನ್ನಿತರ ಯಾವುದೇ ವಿಷಯದಲ್ಲಿ ಗೊಂದಲವಿದ್ದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ನೇರವಾಗಿ ಭೇಟಿ ಮಾಡಿ ಮಾಹಿತಿಗಳನ್ನು ಪಡೆಯಬಹುದು ಎಂದು ಮಾನ್ಯ ಕುಲಪತಿಗಳು ತಿಳಿಸಿರುತ್ತಾರೆ. ಜೊತೆಗೆ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಸಹ ವಿಶ್ವವಿದ್ಯಾನಿಲಯದ ಒಳಿತಿಗಾಗಿಯೇ ಕೆಲಸವನ್ನು ಮಾಡುತ್ತಿದ್ದೇವೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಪ್ರಸ್ತುತ ಮೌಲ್ಯಭವನಕ್ಕೆ ಸಂಬಂಧಿಸಿದ ಟೆಂಡರ್ ವಿಷಯವಾಗಿ ಅಂತಿಮವಾಗಿ ಯಾವ ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ಕುಲಸಚಿವ (ಪರೀಕ್ಷಾಂಗ) ಅವರನ್ನು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಮೌಲ್ಯಭವನಕ್ಕೆ ಸಂಬಂಧಿಸಿದ ಟೆಂಡರ್ ವಿಷಯವಾಗಿ ನಾನು ಹಾಗೂ ಇನ್ನಿತರ ಸದಸ್ಯರುಗಳಿಗೂ ಯಾವುದೇ ಆಕ್ಷೇಪಣೆಗಳಿಲ್ಲದಿರು ವುದನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ಟೆಂಡರ್ ವಿಷಯವಾಗಿ ದಾಖಲೆಗಳನ್ನು ನಾವೇ ಖುದ್ದಾಗಿ ಪರಿಶೀಲಿಸಿ ಅದರಲ್ಲಿ ಯಾವುದೇ ತೊಂದರೆಗಳಿಲ್ಲದಿದ್ದಲ್ಲಿ ಹಾಗೂ ಈ ಹಿಂದೆ ನಡೆದಂತಹ ಸಭೆಯಲ್ಲಿ ಪರೀಕ್ಷಾ ವಿಧಾನವನ್ನು ಡಿಜಿಟಲೀಕರಣಗೊಳಿಸುವ ಸಂಬಂಧ ಚರ್ಚಿತವಾಗಿರುವುದರಿಂದ ವಿಶ್ವವಿದ್ಯಾನಿಲಯವು ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸಬಹುದೆಂದು ಮಾನ್ಯ ಕುಲಪತಿಗಳಿಗೆ ತಿಳಿಸಿದರು. ಸದರಿ ವಿಷಯಕ್ಕೆ ಇನ್ನುಳಿದ ಸದಸ್ಯರುಗಳೆಲ್ಲರೂ ಸಹಮತವನ್ನು ಸೂಚಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯದ ಒಳಿತಿಗಾಗಿ ಇನ್ನು ಮುಂದೆ ಕರೆಯುವಂತಹ ಟೆಂಡರ್ ಬಗೆಗಿನ ವಿಷಯವು ಎಲ್ಲಾ ಅಧಿಕಾರಿಗಳ ಗಮನಕ್ಕೂ ತರಬೇಕೆಂದು ಇಲ್ಲವಾದಲ್ಲಿ ಯಾರಾದರೂ ಅಧಿಕಾರಿಗಳಿಗೆ ಪ್ರಶ್ನೆಗಳನ್ನು ಕೇಳಿದಾಗ ಅವರು ಉತ್ತರ ನೀಡುವಂತಿರಬೇಕು. ಆದ್ದರಿಂದ ಸಹಕಾರ ಮನೋಭಾವನೆಯಿಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಎಲ್ಲಾ ಕೆಲಸಗಳನ್ನು ಸುಗಮವಾಗಿ ನಡೆಸುವಂತೆಯೂ ಸಹ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸುವ ಸಂಬಂಧ ಕೊನೆಯದಾಗಿ ಸಿಂಡಿಕೇಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ಕೇಳಿದರು.

| | |
|---|---|
| | ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ನಮ್ಮ ದೇಶವು ಡಿಜಿಟಲ್ ಇಂಡಿಯಾವಾಗಿರುವುದರಿಂದ, ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸಲು ನಮ್ಮ ಸಮ್ಮತವಿದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ಡಾ. ಟಿ.ಆರ್. ಚಂದ್ರಶೇಖರ್ ಅವರನ್ನು ಹೊರತುಪಡಿಸಿ, ಎಲ್ಲಾ ಸದಸ್ಯರುಗಳು ಸಮ್ಮತಿಯನ್ನು ಸೂಚಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಮಾನಸಗಂಗೋತ್ರಿಯಲ್ಲಿರುವ ಅಧ್ಯಯನ ವಿಭಾಗಗಳಲ್ಲಿ ನಿವೃತ್ತಿ ಹೊಂದಿರುವ ಪ್ರಾಧ್ಯಾಪಕರುಗಳು ಉದಾಹರಣೆಗೆ, ಪ್ರೊ. ಸಿ. ಬಸವರಾಜು ಹಾಗೂ ಪ್ರೊ. ಮಾದೇಶ್ ಹಾಗೂ ಇನ್ನಿತರ ಪ್ರಾಧ್ಯಾಪಕರುಗಳು ತಮ್ಮ ಅವಧಿ ಮುಗಿದಿದ್ದರೂ ಸಹ ತಮ್ಮ ಕೊಠಡಿಯನ್ನು ತೆರವು ಮಾಡದೆ ಹಾಗೆಯೇ ನಿವೃತ್ತ ಪ್ರಾಧ್ಯಾಪಕರುಗಳು ವರ್ಷಾನುಗಟ್ಟಲೇ ಸದರಿ ಕೊಠಡಿಯನ್ನು ಬಳಸಿಕೊಳ್ಳುವುದು ನಿಯಮಬಾಹಿರ. ಆದ್ದರಿಂದ ತಕ್ಷಣವೇ ಅಂತಹ ಪ್ರಾಧ್ಯಾಪಕರುಗಳನ್ನು ತೆರವುಗೊಳಿಸಲು ಕ್ರಮವನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಭವನದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ಕೈಗೊಳ್ಳುವ ಸಂಬಂಧ ಅವಶ್ಯವಿರುವ ಐ.ಟಿ. ಪರಿಕರಗಳು ಮತ್ತು ಪೀಠೋಪಕರಣಗಳನ್ನು ಖರೀದಿಸಿ ಅಳವಡಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/6.18** | ಡಾ. ಶ್ರೇಯಸ್ ಎನ್.ಆರ್., ಸಹಾಯಕ ಪ್ರಾಧ್ಯಾಪಕರು, ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇಲ್ಲಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿರುವ ಬಗ್ಗೆ. |
| | ಶ್ರೀ ಕೆ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿ ಸಾಕಷ್ಟು ಮನವಿಗಳು ಬಂದಿರುತ್ತದೆ. ಈ ರೀತಿಯ ವಿಷಯಗಳು ಹಿಂದಿನ ಯಾವುದೇ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುತ್ತಿರಲಿಲ್ಲವೆಂದು ತಿಳಿಸುತ್ತಾ, ಈ ರೀತಿಯ ಅಂತರ ವಿಶ್ವವಿದ್ಯಾನಿಲಯದ ವರ್ಗಾವಣೆಗೆ ಅವಕಾಶ ನೀಡಿದರೆ ಇನ್ನು ಹೆಚ್ಚಿನ ವಿಶ್ವವಿದ್ಯಾನಿಲಯಗಳಿಂದ ಈ ರೀತಿಯ ಮನವಿಗಳು ಬರುವ ಸಂಭವವಿರುತ್ತದೆಯೆಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಸರ್ಕಾರದ ವತಿಯಿಂದಲೇ ಕ್ರಮಕೈಗೊಳ್ಳಲು ಸೂಚಿಸುವುದು ಸೂಕ್ತವೆಂದರು.<br><br>ಡಾ.ಟಿ.ಆರ್ ಚಂದ್ರಶೇಖರ್‌ರವರು ಮಾತನಾಡಿ, ಹುದ್ದೆ ಸಮೇತ ವರ್ಗಾವಣೆಗೊಂಡರೆ ಸೂಕ್ತವೆಂದು ತಿಳಿಸಿದರು.<br><br>ಡಾ. ಎಂ ಪುಷ್ಪವತಿಯವರು ಮತ್ತು ಶ್ರೀ ಕೆ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವೈಯಕ್ತಿಕ ಕಾರಣದಿಂದ ಬರುವುದರಿಂದ, ಇತರರಿಗೂ ಸಹ ಒಂದು ವೇದಿಕೆಯಾಗುತ್ತದೆ ಆದ್ದರಿಂದ ಸರ್ಕಾರದ ವತಿಯಿಂದಲೇ ಕ್ರಮಕೈಗೊಳ್ಳಲಿ ಎಂದರು. |
| ತೀರ್ಮಾನ | **ಡಾ. ಶ್ರೇಯಸ್ ಎನ್.ಆರ್., ಸಹಾಯಕ ಪ್ರಾಧ್ಯಾಪಕರು ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇಲ್ಲಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹುದ್ದೆ ಸಮೇತ (along with post) ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬರುವುದಾದಲ್ಲಿ ಅವಕಾಶ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/6.19** | Promotions to University Teachers Under UGC-CAS |
| | ಮಾನ್ಯ ಕುಲಪತಿಯವರು ಮಾತನಾಡಿ, ಅಧ್ಯಾಪಕರುಗಳಿಗೆ CAS Promotion ಕೈಗೊಳ್ಳಲಾಯಿತು. ಡಾ. ವಿಜಯ್‌ಕುಮಾರಿ ಕರಿಕಲ್, ಪ್ರಾಧ್ಯಾಪಕರು ಇವರು ಅನಾರೋಗ್ಯದ ಕಾರಣ ಕಳೆದ CAS ಪದೋನ್ನತಿ ಸಂದರ್ಶನಕ್ಕೆ ಗೈರುಹಾಜರಾಗಿದ್ದರು. ಸದರಿಯವರು ಈ ತಿಂಗಳು ವಯೋನಿವೃತ್ತಿ ಹೊಂದುತ್ತಿರುವ ಕಾರಣ CAS Promotion ಕೈಗೊಳ್ಳಲಾಯಿತು ಎಂದು ತಿಳಿಸುತ್ತಾ ಡಾ. ಡೆನಿಯಲ್, ಸಹ ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಡಾ. ಮೀರಾ, ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ ಇವರಿಗೂ ಸಹ CAS ಪದೋನ್ನತಿ ನೀಡಲಾಗಿರುತ್ತದೆ ಎಂದು ತಿಳಿಸಿದರು. |

ಡಾ. ನಟರಾಜು ಹೆಚ್ ಎಸ್‌ರವರು ಮಾತನಾಡಿ, ಡಾ.ಮೀರಾರವರು ಅರ್ಹತೆ ಹೊಂದಿದ್ದಾರೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಮೀರಾರವರು 26-09-2023ರಲ್ಲಿಯೇ ಅರ್ಹತೆ ಹೊಂದಿರುತ್ತಾರೆ ಅದೇ ರೀತಿ ಡಾ. ಭಾರತಿ ಹಿರೇಮಠ್, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು ಇವರಿಗೂ ಸಹ CAS ಪದೋನ್ನತಿ ನೀಡಲಾಗಿರುತ್ತದೆ. ಒಟ್ಟಾರೆ 04 ಅಧ್ಯಾಪಕರುಗಳಿಗೆ CAS ಪದೋನ್ನತಿ ನೀಡಲಾಗಿದೆ ಎಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ಡಾ.ಮೀರಾರವರು ಎಷ್ಟು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರೆಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, CAS ಪದೋನ್ನತಿಗೆ ಒಬ್ಬ ಸಂಶೋಧನಾ ವಿದ್ಯಾರ್ಥಿಗೆ ಮಾರ್ಗದರ್ಶಕರಾಗಿದ್ದರೆ ಸಾಕು ಎಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ಒಬ್ಬ ಸಂಶೋಧನಾ ವಿದ್ಯಾರ್ಥಿಗೆ ಮಾರ್ಗದರ್ಶಕರಾಗಿದ್ದರೆ ಸಾಲದು ಇನ್ನು ಹೆಚ್ಚಿನ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಬಹುದಾಗಿತ್ತು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಡಾ.ಮೀರಾರವರಿಗೆ ಪಿ.ಹೆಚ್‌ಡಿ. ಮಾರ್ಗದರ್ಶಕರಾಗಿ ಮಾನ್ಯತೆ ತಡವಾಗಿ ಲಭ್ಯವಾಯಿತೆಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಉಳಿದ ಅವಧಿಯಲ್ಲಾದರೂ ಸಹ ಅವರು ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವುದಕ್ಕೆ ಸೂಚಿಸಬೇಕೆಂದು ತಿಳಿಸಿದರು.

The recommendations of the Selection Committee in various subjects from the post of Professor to Senior Professor (PG), from Associate Professor to Professor (PG) and from Associate Professor to Professor (UG) furnished below before the Syndicate is approved. Further, the Syndicate has also decided to extend the mohetary benefits to the teachers from the date of the University order and subsequent reporting to the post to which they are promoted.

**FROM PROFESSOR TO SENIOR PROFESSOR (PG)**

(From Academic Level-14 to Academic Level-15)

| Sl. No | Name of the Professor | Subject | Date of Interview | Date of reporting to duty as Professor (AGP Rs.10000) | Date of Eligibility for reporting to the duty as Senior Professor |
|---|---|---|---|---|---|
| 1. | Dr. Vijaykumari S Karikal | KANNADA | 08.10.2025 | 08-08-2013 | **08-08-2023** |

**FROM ASSOCIATE PROFESSOR TO PROFESSOR (PG)**

(From Academic Level-13A to Academic Level-14)

| Sl. No | Name of the Professor | Subject | Date of Interview | Date of reporting to duty as Associate Professor (AGP Rs.9000/Academic level-13A) | Date of Eligibility for reporting to the duty as Professor |
|---|---|---|---|---|---|
| 1. | Dr. Denlal | PHILOSOPHY | 08.10.2025 | 22-09-2019 | **22-09-2022** |

| | | | | | |
|---|---|---|---|---|---|
| 2. | Dr. Meera | DEVELOPMENT STUDIES | | 15-08-2019 | **26-09-2023** |

**FROM ASSOCIATE PROFESSOR TO PROFESSOR (UG)**
(From Academic Level-13A to Academic Level-14)

| **Sl.No** | **Name of the Professor** | **Subject** | **Date of Interview** | **Date of reporting to duty as Associate Professor (AGP Rs.9000/Academic level-13A)** | **Date of Eligibility for reporting to the duty as Professor** |
|---|---|---|---|---|---|
| 1. | Dr. Bharati Hiremath | POLITICAL SCIENCE | **08.10.2025** | 06-09-2020 | **06-09-2023** |

| | |
|---|---|
| **ಸಾಮಾನ್ಯ ಸಭೆ 2025/6.20** | ದಿನಾಂಕ 05-08-2025ರಂದು ನಡೆದ ಕ್ರೀಡಾ ಸಮಿತಿಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು.** |

**<u>ಇತರೆ ವಿಷಯಗಳು:</u>**

1. ಡಾ. ಮಹೇಶ್ ಟಿ.ಬಿ.ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಕುವೆಂಪು ಜಯಂತಿ ಕಾರ್ಯಕ್ರಮವನ್ನು ಆಯೋಜಿಸುವಂತೆ ಮನವಿ ಮಾಡಿಕೊಂಡರು. ಮುಂದುವರೆದು, ಈ ಕಾರ್ಯಕ್ರಮಕ್ಕೆ ಕೆಎಂಎಫ್‌ರವರು ಪ್ರಾಯೋಜಕತ್ವ ನೀಡಲಿದ್ದಾರೆಂದು ಸಭೆಯ ಗಮನಕ್ಕೆ ತಂದರು.

   ಶ್ರೀ ಮಹದೇಶುರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಕುರಿತು ವಿಶ್ವವಿದ್ಯಾನಿಲಯ ಹೇಗೆ ಪ್ರಾರಂಭವಾಗಿದೆ, ವಿಶ್ವವಿದ್ಯಾನಿಲಯಕ್ಕೆ ರಾಷ್ಟ್ರಕವಿ ಕುವೆಂಪುರವರ ಕೊಡುಗೆಯೇನು ಎಂಬುದರ ಜ್ಞಾನವೇ ಇಲ್ಲದಂತಾಗಿದೆ, ಈ ಸಂಬಂಧ ವಿಶ್ವವಿದ್ಯಾನಿಲಯದ ವತಿಯಿಂದ ವಿಶ್ವವಿದ್ಯಾನಿಲಯದ ಬಗ್ಗೆ ತಿಳಿದಿರುವ ಪರಿಣಿತ ವ್ಯಕ್ತಿಗಳನ್ನು ಆಹ್ವಾನಿಸಿ ಓರಿಯೆಂಟೇಷನ್ ಪ್ರೋಗ್ರಾಂ ಹಮ್ಮಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು. ಇದಕ್ಕೆ ಸಂಬಂಧಿಸಿದಂತೆ ಡಾ. ಎಂ.ಪುಷ್ಪವತಿರವರು ಸಹ ದನಿಗೂಡಿಸಿದರು.

   ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ವಿಶ್ವವಿದ್ಯಾನಿಲಯ ಪ್ರಾರಂಭವಾಗಿ, ವಿಶ್ವವಿದ್ಯಾನಿಲಯ ನಡೆದು ಬಂದ ದಾರಿ ಮತ್ತು ಸರ್. ಎಂ.ವಿಶ್ವೇಶ್ವರಯ್ಯ, ರಾಷ್ಟ್ರಕವಿ ಕುವೆಂಪುರವರ ಕುರಿತು ಅರಿವು ಮೂಡಿಸುವ ಕಾರ್ಯವಾಗಬೇಕೆಂದು ಮತ್ತು ಅವರ ಸಾಧನೆಯ ಕಿರು ಹೊತ್ತಿಗೆಗಳನ್ನು ಓರಿಯೆಂಟೇಷನ್ ಪ್ರೋಗ್ರಾಂ ದಿನದಂದು ವಿದ್ಯಾರ್ಥಿಗಳಿಗೆ ವಿತರಿಸಬೇಕೆಂದು ತಿಳಿಸಿದರು.

2. ಮಾನ್ಯ ಕುಲಪತಿಯವರು ಮಾತನಾಡಿ, ಉನ್ನತ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಮಣಿಪುರಂ ನಿವಾಸಿಯಾಗಿದ್ದು, ಇವರು ದೆಹಲಿಯಿಂದ ಮಣಿಪುರಂಗೆ ಬರಲು ರಸ್ತೆಯನ್ನು ರೂ. 100 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುತ್ತಾರೆ. ಯಾವುದೇ ಸರ್ಕಾರದ ಸಹಾಯವನ್ನು ಪಡೆಯದೆ ಅವರೇ ಹಣ ಸಂಗ್ರಹವನ್ನು ಮಾಡಿ ಸದರಿ ಕೆಲಸವನ್ನು ಕೈಗೊಂಡಿರುತ್ತಾರೆ. ಇವರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರೂಸಾದಿಂದ ಯಾವ ಯಾವ ಕೆಲಸವಾಗಿದೆ ಎಂಬುದನ್ನು ಪರಿಶೀಲಿಸಿರುತ್ತಾರೆ. ರೂಸಾದಿಂದ ಮಂಜೂರಾಗಿದ್ದ ಹಣವು ಬಿಡುಗಡೆಯಾಗಿರುವುದಿಲ್ಲ, ಇದೇ ರೀತಿ 9 ವಿಶ್ವವಿದ್ಯಾನಿಲಯಗಳಲ್ಲಿ ತಾಂತ್ರಿಕ ಸಮಸ್ಯೆಯಿಂದ ರೂಸಾ ಯೋಜನೆಗೆ ಸಂಬಂಧಿಸಿದ ಹಣವು ಸದ್ಬಳಕೆಯಾಗದಿರುವುದು ಕಂಡು ಬಂದಿದೆ. ಕಳೆದ ಬಾರಿ ಬೆಂಗಳೂರಿನಲ್ಲಿ

ಅವರನ್ನು ಭೇಟಿ ಮಾಡಿರುತ್ತೇನೆ, ರೂಸಾ ಹಣ ಬಿಡುಗಡೆಗೆ ಸಹಕರಿಸುವುದಾಗಿ ತಿಳಿಸಿರುತ್ತಾರೆ, ಇದು ನನ್ನ ನಿರಂತರ ಪ್ರಯತ್ನಕ್ಕೆ ತೃಪ್ತಿ ತಂದುಕೊಟ್ಟಿದೆ ಎಂದು ತಿಳಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ರೂಸಾ ಯೋಜನೆಯಡಿ ಮಂಜೂರಾಗಿರುವ ಹಣವನ್ನು ಮಾರ್ಚ್ 2026ರ ಅಂತ್ಯದೊಳಗೆ ವ್ಯಯ ಮಾಡಬೇಕಾಗಿರುವುದು ಅನಿವಾರ್ಯ ಹಾಗೂ ಈ ಕುರಿತು ಯೋಜನೆಯನ್ನು ರೂಪಿಸುವ ಕಾರ್ಯದಲ್ಲಿ ತೊಡಗಿರುತ್ತೇನೆಂದು ತಿಳಿಸಿದರು.

3. ಶ್ರೀ ಮಹದೇಶುರವರು ಮಾತನಾಡಿ, ವಿಜ್ಞಾನ ಭವನದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಉಪಕರಣಗಳು ತುಕ್ಕು ಹಿಡಿಯುತ್ತಿರುವುದು ಕಂಡುಬಂದಿದೆ ಎಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ವಿಜ್ಞಾನ ಭವನದ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸದೆ ವಿದ್ಯಾರ್ಥಿಗಳು ಹೆಚ್‌ಪಿಎಸ್‌ಸಿ, ಜಿಸಿಎಂಗಳ ಉಪಕರಣಗಳು ಲಭ್ಯವಿಲ್ಲದ ಕಾರಣ ಹೊರಗಿನ ಲ್ಯಾಬ್‌ನಲ್ಲಿ ಟೆಸ್ಟಿಂಗ್ ಮಾಡಿಸಲು ಹೋದರೆ ದುಬಾರಿ ದರ ನೀಡುತ್ತಿದ್ದೇವೆಂದು ತಿಳಿಸಿರುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಜ್ಞಾನ ಭವನದಲ್ಲಿ ಹೆಚ್‌ಪಿಎಸ್‌ಸಿ, ಜಿಸಿಎಂಗಳ ಉಪಕರಣಗಳು ಲಭ್ಯವಿದೆ, ವಿಜ್ಞಾನ ಭವನದ ಉಪಕರಣಗಳು ವಾರ್ಷಿಕ ನಿರ್ವಹಣೆಯಾಗದ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಸಿಎಸ್‌ಆರ್ ಫಂಡ್ ತರಿಸುವ ಕಾರ್ಯವನ್ನು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಪ್ರಯತ್ನಿಸುವುದು ಒಳ್ಳೆಯದು ಎಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ನಮ್ಮಲ್ಲಿರುವ ಪರಿಣಿತರನ್ನೇ ಸಿಎಸ್‌ಆರ್ ಫಂಡ್ ತರಿಸಲು ಕ್ರಮಕೈಗೊಳ್ಳಬೇಕಾಗಿತ್ತು ಎಂದು ತಿಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಹಿಂದುಳಿದ(ಓಬಿಸಿ) ಸಂಶೋಧನಾ ವಿದ್ಯಾರ್ಥಿನಿಯರಿಗೆ ಲ್ಯಾಪ್‌ಟಾಪ್ ನೀಡಿರುತ್ತಾರೆ. ಮಹಿಳಾ ವಿದ್ಯಾರ್ಥಿನಿಲಯಗಳ ಶೌಚಾಲಯಗಳ ದುರಸ್ಥಿ ಕೆಲಸಗಳು ಸಿಎಸ್‌ಆರ್ ಫಂಡ್‌ನಲ್ಲಿ ವ್ಯಯ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯ ಈಗಾಗಲೇ ಶ್ರೀ ಗಿರೀಶ್ ಭಾಫ ಇವರನ್ನು ಯಾವುದೇ ವೇತನವನ್ನು ನೀಡದೆ ಸಮಾಲೋಚಕರನ್ನಾಗಿ (Consultant) ನೇಮಕ ಮಾಡಿದ್ದು, ಇವರು ಕೈಗಾರಿಕ ವಲಯಗಳಲ್ಲಿ ಹೆಚ್ಚು ಅನುಭವ ಹೊಂದಿರುತ್ತಾರೆ. ಇವರನ್ನೊಳಗೊಂಡಂತೆ ಸಿಂಡಿಕೇಟ್ ಸದಸ್ಯರಿರುವ ಒಂದು ಸಮಿತಿಯನ್ನು ರಚಿಸಲಾಗುತ್ತದೆ, ಈ ಮೂಲಕ ಸಿಎಸ್‌ಆರ್ ಫಂಡ್ ತರಿಸುವ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಇದರಲ್ಲಿ ಶ್ರೀ ಗಿರೀಶ್ ಭಾಫರವರು ಕೈಗಾರಿಕ ಮತ್ತು ವಿಶ್ವವಿದ್ಯಾನಿಲಯಗಳ ನಡುವೆ ಒಂದು ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ತಿಳಿಸಿದರು.

4. ಶ್ರೀ ಮಹದೇಶುರವರು ಮಾತನಾಡಿ, ಮೈಸೂರು– ಹುಣಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ಕುಕ್ಕರಹಳ್ಳಿ ಕೆರೆಯ ದಂಡೆಯಲ್ಲಿ ಭೂದೇವಿ ಫಾರಂನವರು 10 ಎಕರೆ ಜಮೀನಿನಲ್ಲಿ ನರ್ಸರಿ ತೋಟವನ್ನು ನಿರ್ವಹಿಸುತ್ತಿದ್ದು ಜೊತೆಗೆ ಮಾನಸ ಗಂಗೋತ್ರಿಗೆ ಪ್ರವೇಶಿಸುವ ರಸ್ತೆಗೆ ಹೊಂದಿಕೊಂಡಂತೆ (ನೀಲ್‌ಗಿರೀಸ್) ಕಟ್ಟಡವನ್ನು ಸಹ ನಿರ್ಮಿಸಿಕೊಂಡಿರುತ್ತಾರೆ. ಸದರಿ ಜಾಗದ ಕುರಿತು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯವು ಸದರಿ ಜಾಗವನ್ನು ಗುತ್ತಿಗೆ ಮೂಲಕ ನೀಡಿದೆಯೇ ಎಂಬುದನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯಕ್ಕೆ ಸದರಿ ಜಾಗವನ್ನು ಹಿಂಪಡೆಯುವ ಸಂಬಂಧ ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು.

ಕುಲಸಚಿವರು ಮಾತನಾಡಿ, ಮೈಸೂರು– ಹುಣಸೂರು ಮುಖ್ಯ ರಸ್ತೆಯಲ್ಲಿರುವ ಸುಮಾರು 10 ಎಕರೆ ಜಮೀನಿನ ಮಾಹಿತಿ ಕೂಡ ವಿಶ್ವವಿದ್ಯಾನಿಲಯ ಕಾರ್ಯಪಾಲಕ ಅಭಿಯಂತರರ ಬಳ ಇರುವುದಿಲ್ಲ, ಇದನ್ನು ಪೂರ್ಣವಾಗಿ ವಿಚಾರಿಸಿದಾಗ ನೀಲಗಿರೀಸ್‌ರವರಿಗೆ 10 ಎಕರೆ ಜಾಗವನ್ನು ನರ್ಸರಿಗಾಗಿ 30 ವರ್ಷಗಳಿಗೆ ಭೋಗ್ಯಕ್ಕೆ ನೀಡಲಾಗಿದೆ ಎಂಬ ಮಾಹಿತಿ ನೀಡಿರುತ್ತಾರೆ, ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪತ್ರ ಮುಖೇನ ನೀಡಬೇಕೆಂದು ತಿಳಿಸಿರುತ್ತೇನೆಂದರು.

ಶ್ರೀ ಮಹದೇಶುರವರು ಮಾತನಾಡಿ, ವಿಶ್ವವಿದ್ಯಾನಿಲಯದ ಸ್ಟೇಡಿಯಂನ ಎದುರಿನ ಜಾಗದಲ್ಲಿ ಕೂಡ ಜಾಗ ಆಕ್ರಮಿಸಿಕೊಳ್ಳುತ್ತಿರುವುದು ಗಮನಿಸಿರುತ್ತೇನೆ. ಭೂದೇವಿ ಫಾರಂ ಮೈಸೂರು ಇವರ ವಶದಲ್ಲಿರುವ ಸದರಿ 10 ಎಕರೆಗಿಂತಲೂ ಹೆಚ್ಚಾಗಿ ಜಾಗ ಪಡೆದಿರುವುದಾಗಿ ಅನುಮಾನ ಬಂದಿದೆ, ಅವರು ಆ ಜಾಗದಲ್ಲಿ ವಾಣಿಜ್ಯೋದ್ಯಮ ಕಟ್ಟಡವನ್ನು ಕಟ್ಟುವ ಸಂಭವ ಹೆಚ್ಚಿರುತ್ತದೆಯೆಂದು ತಿಳಿಸಿದರು. ಒಂದು ವೇಳೆ ವಿಶ್ವವಿದ್ಯಾನಿಲಯದ ಸ್ಟೇಡಿಯಂನ ಎದುರಿನ ಚಿಕ್ಕ ಜಾಗ ಭೂದೇವಿ ಫಾರಂರವರದೆಂದು ಕಂಡು ಬಂದರೆ, ಸರ್ಕಾರಕ್ಕೆ ಪತ್ರ ಬರೆದು ಬದಲಿ ಜಾಗ ನೀಡುವುದಾಗಿ ತಿಳಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು ಇದಕ್ಕೆ ಸಿಂಡಿಕೇಟ್ ಸದಸ್ಯರು ಸಹ ಕೈಜೋಡಿಸುವುದಾಗಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿ ಸ್ಥಳಕ್ಕೆ ಸಂಬಂಧಿಸಿದಂತೆ ಎಲ್ಲಾ ನಕ್ಷೆ, ದಾಖಲೆಗಳನ್ನು ನೀಡುವಂತೆ ಕೋರಿ ಈಗಾಗಲೇ ನಗರಮಾಪನ ಯೋಜನಾಧಿಕಾರಿಗಳು, ನಜರ್‌ಬಾದ್, ಮೈಸೂರು ಇವರಿಗೆ ಪತ್ರ ಬರೆದಿದ್ದು, ದಾಖಲೆಗಳು ಕೈ ಸೇರಿದ ಕೂಡಲೇ ಅಗತ್ಯ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

5. ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರು ವೇತನ ಪರಿಷ್ಕರಿಸುವಂತೆ ಒತ್ತಡ ತರುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ಸಮಿತಿ ರಚಿಸಲಾಗಿತ್ತು. ಸಮಿತಿಯ ವರದಿಯನ್ನು ಪರಿಶೀಲಿಸಿ ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗ ಹಾಗೂ ಘಟಕ ಕಾಲೇಜುಗಳಲ್ಲಿ ಈ ಕೆಳಕಂಡ ಕಾರ್ಯಭಾರಗಳ ಅಡಿಯಲ್ಲಿ ಒಟ್ಟಾರೆಯಾಗಿ 494 ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆಂದು ಸಭೆಗೆ ವಿವರಿಸಿದರು.

| ಒಟ್ಟು 494 ಜನ ಅತಿಥಿ ಉಪನ್ಯಾಸಕರು | | |
|---|---|---|
| **ಕಾರ್ಯಭಾರ** | **ಅತಿಥಿ ಉಪನ್ಯಾಸಕರ ಸಂಖ್ಯೆ** | **ಶೇಕಡವಾರು** |
| 12 ಗಂಟೆಗಳ ಕಾರ್ಯಭಾರ | 252 | 52% |
| 08 ಗಂಟೆಗಳ ಕಾರ್ಯಭಾರ | 184 | 37% |
| 04 ಗಂಟೆಗಳ ಕಾರ್ಯಭಾರ | 53 | 11% |
| **ಒಟ್ಟು** | **494** | **100%** |

ಅತಿಥಿ ಉಪನ್ಯಾಸಕರ 04 ಗಂಟೆಗಳ ಕಾರ್ಯಭಾರವನ್ನು ರದ್ದುಪಡಿಸಬೇಕೆಂದು ಸಮಿತಿಯು ತಿಳಿಸಿರುತ್ತದೆ. ಕೆಲವು ವಿಭಾಗಗಳಲ್ಲಿ 04 ಗಂಟೆಗಳ ಕಾರ್ಯಭಾರ ಅವಶ್ಯಕತೆ ಬಂದಲ್ಲಿ ಹಾಗೂ ಕೆಲವು ವಿಭಾಗಗಳಲ್ಲಿ ವಿಶ್ವವಿದ್ಯಾನಿಲಯವು ಅತಿಥಿ ಉಪನ್ಯಾಸಕರ ನೇಮಕಾತಿಗೆ ನಿರ್ದಿಷ್ಟಪಡಿಸಿರುವ ಪರಿಣಿತಿಯನ್ನು ಹೊಂದಿರದಂತಹ ಅಧ್ಯಾಪಕರು ಲಭ್ಯವಿಲ್ಲದಂತಹ ಸಂದರ್ಭಗಳಲ್ಲಿ 04 ಗಂಟೆಗಳ ಕಾರ್ಯಭಾರ ನೀಡಲೇ ಬೇಕಾಗುತ್ತದೆ. ಆದ್ದರಿಂದ 04 ಗಂಟೆಗಳ ಕಾರ್ಯಭಾರ ರದ್ದುಪಡಿಸಲು ಸಾಧ್ಯವಿಲ್ಲವೆಂದು ಹಾಗೂ ಈಗಾಗಲೇ ನಾನು 04 ಗಂಟೆಗಳ ಕಾರ್ಯಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳ ಸಂಖ್ಯೆಯನ್ನು ಶೇಕಡ 10ಕ್ಕೆ ಮಿತಿಗೊಳಿಸಲಾಗಿದೆಯೆಂದು ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆ ಸಮಿತಿಯಲ್ಲಿ ನಾನು ಒಬ್ಬ ಸದಸ್ಯನಾಗಿರುತ್ತೇನೆ, ಸಮಿತಿಯು ಸುಧೀರ್ಘವಾಗಿ ಚರ್ಚಿಸಿ ವಿಸರ್ಜನೆ ಕೂಡ ಮಾಡಲಾಗಿರುತ್ತದೆ.

ಸಮಿತಿಯು ವಿಸರ್ಜನೆಯಾದರೂ ಕೂಡ ನನ್ನ ಗೈರುಹಾಜರಾತಿಯಲ್ಲಿ ಮತ್ತೊಮ್ಮೆ ಅಧ್ಯಕ್ಷರು ಸಭೆಯನ್ನು ನಡೆಸಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಮಿತಿಯು ಅತಿಥಿ ಉಪನ್ಯಾಸಕರ ವರ್ಗವಾರು, ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ, ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟಾರೆ ಅತಿಥಿ ಉಪನ್ಯಾಸಕರ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಂಡಿರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯದ ಇಂದಿನ ಆರ್ಥಿಕ ಸ್ಥಿತಿಗತಿಯನ್ನು ಪರಾಮರ್ಶಿಸಿರುವುದಿಲ್ಲ ಈ ಮೇಲಿನ ಅಂಶಗಳನ್ನು ಅವಲೋಕಿಸಿ ವಿಶ್ವವಿದ್ಯಾನಿಲಯದ ನಾಲ್ಕು ಘಟಕ ಕಾಲೇಜು ಹಾಗೂ ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ವರ್ಗವಾರು ಮಾಹಿತಿಗಳನ್ನು ಪಡೆದಿದ್ದು, ಸದರಿ ಮಾಹಿತಿಯು ಈ ಕೆಳಕಂಡಂತಿದೆ.

| **ಕಾಲೇಜುಗಳು** | **ಅತಿಥಿ ಉಪನ್ಯಾಸಕರ ಸಂಖ್ಯೆ** |
|---|---|
| ಮಹಾರಾಜ ಕಾಲೇಜು | 103 |
| ಯುವರಾಜ ಕಾಲೇಜು | 115 |
| ಸಂಜೆ ಕಾಲೇಜು | 35 |
| ಲಲಿತ ಕಲಾ ಕಾಲೇಜು | 07 |
| ಮಾನಸಗಂಗೋತ್ರಿಯ ಸ್ನಾತಕೋತ್ತರ ಅಧ್ಯಯನ ವಿಭಾಗಗಳು | 234 |
| ಒಟ್ಟು | **494** |

ಮುಂದುವರೆದು **ಒಟ್ಟಾರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಲ್ಲಿ ವರ್ಗವಾರು ಹಾಗೂ ಶೇಕಡವಾರು ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ವಿವರ ಈ ಕೆಳಕಂಡಂತಿದೆ.**

| ಒಟ್ಟು 494 ಜನ ಅತಿಥಿ ಉಪನ್ಯಾಸಕರಲ್ಲಿ | | |
|---|---|---|
| **ಜಾತಿವಾರು** | **ಶೇಕಡವಾರು** | **ಅತಿಥಿ ಉಪನ್ಯಾಸಕರ ಸಂಖ್ಯೆ** |
| ಎಸ್‌ಸಿ | 35% | 176 |
| ಎಸ್‌ಟಿ | 4.8% | 24 |
| ಕ್ಯಾಟಗರಿ-1 | 3.5% | 17 |
| 2ಎ | 10.3% | 51 |
| 2ಬಿ | 5% | 24 |
| 3ಎ | 19.8% | 98 |
| 3ಬಿ | 8.3% | 43 |
| ಸಾಮಾನ್ಯ | 12.% | 60 |
| **ಒಟ್ಟು** | **99.2** | **493** |

ಶ್ರೀ ಮಹದೇಶುರವರು ಮಾತನಾಡಿ, ರೋಸ್ಟರ್ ಅನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಕೊಳ್ಳಲಾಗಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ರೋಸ್ಟರ್ ಅನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿಲ್ಲದಿರುವುದೇ ಸಮಸ್ಯೆಯಾಗಿರುವುದು ಎಂದು ತಿಳಿಸಿದರು. ಪ್ರಸ್ತುತ ಅತಿಥಿ ಉಪನ್ಯಾಸಕರುಗಳಿಗೆ ನೀಡುತ್ತಿರುವ ವೇತನವು ಕೋಷ್ಟಕದಲ್ಲಿದ್ದು ಶೇ. 22ರಷ್ಟು ವೇತನವನ್ನು ಪರಿಷ್ಕರಿಸಲು ಸಮಿತಿಯು ಶಿಫಾರಸ್ಸು ಮಾಡಿದೆ ಎಂದು ಸಭೆಗೆ ತಿಳಿಸಿದರು.

| **ಕಾರ್ಯಭಾರ** | **ಅತಿಥಿ ಉಪನ್ಯಾಸಕರ ಸಂಖ್ಯೆ** | **ಅತಿಥಿ ಉಪನ್ಯಾಸಕರ ಪ್ರಸ್ತುತ ವೇತನ** |
|---|---|---|
| **ಯುಜಿಸಿ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರು ಪ್ರಸ್ತುತ ಪಡೆಯುತ್ತಿರುವ ವೇತನ** | | |
| 12 ಗಂಟೆಗಳ ಕಾರ್ಯಭಾರ | 252 | 28,000/- |
| 08 ಗಂಟೆಗಳ ಕಾರ್ಯಭಾರ | 184 | 18,500/- |

| | | |
|---|---|---|
| ೦4 ಗಂಟೆಗಳ ಕಾರ್ಯಭಾರ | 53 | 8,500/- |
| ಒಟ್ಟು | **494** | |

| **ಯುಜಿಸಿ ಅರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರು ಪ್ರಸ್ತುತ ಪಡೆಯುತ್ತಿರುವ ವೇತನ** | |
|---|---|
| **12 ಗಂಟೆಗಳ ಕಾರ್ಯಭಾರ** | 24,000/- |
| **08ಗಂಟೆಗಳ ಕಾರ್ಯಭಾರ** | 16,000/- |
| 04ಗಂಟೆಗಳ ಕಾರ್ಯಭಾರ | 8,500/- |

ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ NAAC ಸಮಿತಿಯು ಭೇಟಿ ನೀಡುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಉಪನ್ಯಾಸಕರ ಅವಶ್ಯಕತೆಯಿರುವ ಅಂಶಗಳನ್ನು ಪರಿಗಣಿಸಿ ಯುಜಿಸಿ ಅರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಪ್ರಸ್ತುತ ಪಡೆಯುತ್ತಿರುವ ವೇತನಕ್ಕೆ ರೂ.3,000/- ದಿಂದ ರೂ.3,500/- ರಂತೆ ವೇತನ ಪರಿಷ್ಕರಿಸಬಹುದೆಂದು ಹಾಗೂ ಯುಜಿಸಿ ಅರ್ಹತೆಯನ್ನು ಹೊಂದಿರದಂತಹ ಅತಿಥಿ ಉಪನ್ಯಾಸಕರಿಗೆ ಯಾವುದೇ ರೀತಿಯ ವೇತನವನ್ನು ಪರಿಷ್ಕರಿಸಲು ಸಾಧ್ಯವಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ದಿನಾಂಕ 29-04-2025ರಂದು ನಡೆದ ಸಭೆಗೆ ಹಾಜರಾಗುವಂತೆ ತಮಗೆ ಸಭಾಸೂಚಿ ಬಂದಿರುವುದಿಲ್ಲ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನಡೆದ ಮೊದಲ ಸಭೆಯಲ್ಲಿಯೇ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸುವ ಸಂಬಂಧ ರಚಿಸಲಾಗಿದ್ದ ಸಮಿತಿಯನ್ನು ವಿಸರ್ಜಿಸಲಾಗಿರುತ್ತದೆ, ನಂತರ ಸಮಿತಿಯ ಸದಸ್ಯನಾಗಿ ನನ್ನನ್ನು ಆಹ್ವಾನಿಸದೆ ನನ್ನ ಗೈರುಹಾಜರಾತಿಯಲ್ಲಿ ಮತ್ತೊಂದು ಸಭೆಯನ್ನು ನಡೆಸಿ ವರದಿ ನೀಡಿರುವುದನ್ನು ವಿರೋಧಿಸುತ್ತೇನೆ ಹಾಗೂ ವರದಿಯನ್ನು ಅಂಗೀಕರಿಸಬಾರದೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಮಿತಿಯ ಅಧ್ಯಕ್ಷರು ವಿಶ್ವವಿದ್ಯಾನಿಲಯದ ಒಂದು ನಿಕಾಯದ ಡೀನರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರು ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಮಾತ್ರ ಸಭೆಯ ಗಮನಕ್ಕೆ ತರುತ್ತಿರುವುದಾಗಿ ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸುವ ಸಮಿತಿ ಸಭೆಯ ತೀರ್ಮಾನಕ್ಕೆ ಪೂರಕವಾಗಿರುತ್ತದೆಯೇ ಅಥವಾ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಕ್ಕೆ ಪೂರಕವಾಗಿರುತ್ತದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸಭೆಯ ತೀರ್ಮಾನಕ್ಕೆ ಪೂರಕವಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸುವ ಸಮಿತಿಗೆ ನಾನು ಕೂಡ ಸದಸ್ಯನಾಗಿರುತ್ತೇನೆ, ಮೊದಲನೇಯದಾಗಿ, ಸಮಿತಿಯು ಶಿಫಾರಸ್ಸು ಮಾಡಿರುವ ಅತಿಥಿ ಉಪನ್ಯಾಸಕರ ವೇತನವು ಕಾಲೇಜಿನ ಶಿಕ್ಷಣ ಇಲಾಖೆಗಳ ವೇತನಕ್ಕಿಂತ ಕಡಿಮೆ ಇದೆ. ಎರಡನೇಯದಾಗಿ ಆರ್ಥಿಕ ಸಂಕಷ್ಟ ಎಂದು ಬಿಂಬಿಸುವಾಗ ಸಮಿತಿ ಸಭೆಯಲ್ಲಿ ಹಣಕಾಸು ಅಧಿಕಾರಿಗಳು ಅಥವಾ ಉಪಹಣಕಾಸು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿರಬೇಕಾಗಿತ್ತು. ಯಾರು ಸಹ ಹಣಕಾಸು ವಿಭಾಗದಿಂದ ಸಭೆಗೆ ಹಾಜರಾಗಿರುವುದಿಲ್ಲ. ಮೂರನೇಯದಾಗಿ ಸಮಿತಿಯು ಡಾ. ಟಿ.ಆರ್.ಚಂದ್ರಶೇಖರ್‌ರವರನ್ನು ಸಭೆಗೆ ಆಹ್ವಾನಿಸಿರುವುದಾಗಿ ನಾನು ಭಾವಿಸಿರುತ್ತೇನೆ, ಸಭೆಯಲ್ಲಿ ಡಾ. ಟಿ.ಆರ್.ಚಂದ್ರಶೇಖರ್‌ರವರು ಗೈರುಹಾಜರಾಗಿರುವ ಬಗ್ಗೆ ವಿಚಾರಿಸಿರುತ್ತೇನೆ ಅಲ್ಲಿನ ಸದಸ್ಯರು

ಡಾ. ಟಿ.ಆರ್.ಚಂದ್ರಶೇಖರ್‌ರವರಿಗೆ ಸಭಾಸೂಚಿ ರವಾನಿಸಲಾಗಿದೆಯೆಂದು ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆ ಬಗ್ಗೆ ನಮಗೆ ಯಾವುದೇ ತಕರಾರು ಇರುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆ ಸಂಬಂಧ ವಿಶ್ವವಿದ್ಯಾನಿಲಯ ಒಂದು ಸಮಿತಿ ರಚಿಸಿರುತ್ತದೆ, ಆ ಸಮಿತಿಯಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿರುತ್ತೇನೆ. ದಿನಾಂಕ 11-03-2025ರಂದು ನಡೆದ ಸಭೆಯಲ್ಲಿ ಸುಧೀರ್ಘ ಚರ್ಚೆ ನಡೆಸಿ ಶಿಫಾರಸ್ಸು ಮಾಡಲಾಗಿರುತ್ತದೆ. ಸಮಿತಿಯ ಅಧ್ಯಕ್ಷರಾದ ಪ್ರೊ. ಜಿ. ಜನಾರ್ಧನ್‌ರವರು ಮೊದಲನೆ ಸಭೆಯ ಚರ್ಚೆಯನ್ನು ಅಲ್ಲಗಳೆದು, ಮತ್ತೊಂದು ಸಭೆ ನಡೆಸಿ ನನ್ನ ಗೈರುಹಾಜರಾತಿಯಲ್ಲಿ ವರದಿಯನ್ನು ಸಿದ್ಧಪಡಿಸಿರುತ್ತಾರೆ. ಪ್ರೊ. ಜಿ. ಜನಾರ್ಧನ್‌ರವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು ಮತ್ತು ಇದರಿಂದ ನನಗೆ ಹಕ್ಕುಚ್ಯುತಿಯಾಗಿದೆ ಕೂಡಲೇ ಅವರು ತಕ್ಷಣವೇ ಬಂದು ಕಾರಣ ನೀಡಬೇಕು ಎಂದು ಮತ್ತೊಮ್ಮೆ ಸಭೆಯಲ್ಲಿ ತಿಳಿಸಿದರು.

ಸುಧೀರ್ಘವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ ಸದಸ್ಯರೆಲ್ಲರೂ ಮಾನ್ಯ ಕುಲಪತಿಯವರು ಪ್ರಸ್ತಾಪಿಸಿದಂತೆ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರಲ್ಲಿ ಯುಜಿಸಿ ಅರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾತ್ರ ಶೇಕಡ 15ರಂತೆ ವೇತನವನ್ನು ಪರಿಷ್ಕರಿಸಲು ಸಹಮತವನ್ನು ವ್ಯಕ್ತಪಡಿಸಿದರು.

**ತೀರ್ಮಾನ: ಯುಜಿಸಿ ಅರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಶೇಕಡ 15ರಂತೆ ವೇತನವನ್ನು ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**

6) ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಪಿಂಚಣಿದಾರರು ಸಿಂಡಿಕೇಟ್ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರು ಸಕಾಲದಲ್ಲಿ ಪಿಂಚಣಿ ಪಾವತಿಯಾಗದೆ ಇರುವುದರ ಕುರಿತು ಚರ್ಚಿಸುವುದಿಲ್ಲವೆಂದು ಬೇಸರ ಹೊರಹಾಕುತ್ತಿದ್ದಾರೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದಂತೆ ವಿಶ್ವವಿದ್ಯಾನಿಲಯದ ಆದಾಯದಲ್ಲೇ ಪಿಂಚಣಿ ನೀಡಬೇಕೆಂದು ತಿಳಿಸಿರುತ್ತಾರೆ. ಸರ್ಕಾರದ ಇತರೆ ಇಲಾಖೆಗಳಲ್ಲಿ ಮತ್ತು ಸರ್ಕಾರದ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ವಯೋನಿವೃತ್ತಿ ಹೊಂದಿರುವ ನಿವೃತ್ತ ಉದ್ಯೋಗಿಗಳಿಗೆ ಸರ್ಕಾರದ ವತಿಯಿಂದಲ್ಲೇ ಪಿಂಚಣಿಯನ್ನು ನೀಡುತ್ತಿರುತ್ತದೆ. ಅದೇ ರೀತಿ ಸರ್ಕಾರದ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೂ ಸರ್ಕಾರವೇ ವೇತನವನ್ನು ನೀಡುತ್ತದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಯಾವುದೇ ರೀತಿಯ ವೇತನವನ್ನು ನೀಡುವುದಿಲ್ಲ. ಬದಲಾಗಿ ಸದರಿ ಅತಿಥಿ ಉಪನ್ಯಾಸಕರುಗಳಿಗೆ ಮತ್ತು ತಾತ್ಕಾಲಿಕ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೂ ಸಹ ವಿಶ್ವವಿದ್ಯಾನಿಲಯ ತನ್ನ ಆಂತರಿಕ ಸಂಪನ್ಮೂಲದಿಂದಲೇ ವೇತನವನ್ನು ನೀಡುತ್ತಿದೆ. ಮುಂದುವರೆದು, ಪಿಂಚಣಿದಾರರ ಪಿಂಚಣಿಗಾಗಿ ವಾರ್ಷಿಕ ಆಯವ್ಯಯದಲ್ಲಿ ನಿಗದಿಪಡಿಸುವ ಸಂಪೂರ್ಣ ಹಣವನ್ನು ಕಳೆದ ಐದಾರು ವರ್ಷಗಳಿಂದ ಸಹ ಸರ್ಕಾರವು ನೀಡುತ್ತಿಲ್ಲದೆ ಇರುವುದು ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿದೆ.

ವಿಶ್ವವಿದ್ಯಾನಿಲಯದ ಆದಾಯವೆಂದರೆ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಶುಲ್ಕ ಮಾತ್ರ, ಇದರಲ್ಲಿ ಪಿಂಚಣಿ, ತಾತ್ಕಾಲಿಕ ಅತಿಥಿ ಉಪನ್ಯಾಸಕರ ವೇತನ, ಅಧ್ಯಾಪಕೇತರ ನೌಕರರ ವೇತನ, ವಿಶ್ವವಿದ್ಯಾನಿಲಯ ನಿರ್ವಹಣೆ ವೆಚ್ಚ ಇವುಗಳನ್ನೆಲ್ಲಾ ಭರಿಸುವುದಕ್ಕೆ ಕಷ್ಟವಾಗುತ್ತಿದೆ. ಇದರ ವಿಚಾರವಾಗಿ

ಕುಲಸಚಿವರು, ಹಣಕಾಸು ಅಧಿಕಾರಿಗಳು ಎಲ್ಲರೂ ಕೂಡ ಪಿಂಚಣಿ ಹಣವನ್ನಾದರೂ ನೀಡಿ ಎಂದು ಸರ್ಕಾರಕ್ಕೆ ಮನವಿ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ವಿಶ್ವವಿದ್ಯಾನಿಲಯ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಬರುವ ಆದಾಯದಲ್ಲೇ ಪಿಂಚಣಿಯನ್ನು ನೀಡಿ ಎಂದು ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ತಿಳಿಸುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ಹಣಕಾಸು ಅಧಿಕಾರಿಗಳು ಪಿಂಚಣಿ ಅನುದಾನವನ್ನು ಬಿಡುಗಡೆಗೊಳಿಸುವ ಸಂಬಂಧ ಸರ್ಕಾರಕ್ಕೆ ಎಷ್ಟು ಬಾರಿ ಪತ್ರ ವ್ಯವಹಾರ ನಡೆಸಿ ಅನುದಾನವನ್ನು ಪಡೆಯುವುದರ ಸಂಬಂಧ ಯಾವ ಪ್ರಯತ್ನ ಮಾಡಿರುವಿರಿ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸರ್ಕಾರಕ್ಕೆ ಹಲವು ಬಾರಿ ಪತ್ರ ಬರೆಯಲಾಗಿದ್ದು ಹಾಗೂ ಖುದ್ದು ಭೇಟಿ ನೀಡಿರುವುದಾಗಿ ತಿಳಿಸಿದರು. ಮುಂದುವರೆದು, ಸರ್ಕಾರದಲ್ಲಿ ಮಾಹಿತಿ ನೀಡುವಂತೆ ನಾನಾ ರೀತಿಯ ಅರ್ಜಿ ನಮೂನೆಗಳನ್ನು ನೀಡಿ ಮಾಹಿತಿಯನ್ನು ಪಡೆಯುತ್ತಾರೆಯೇ ಹೊರತು ಪಿಂಚಣಿ ಸಂಬಂಧ ಯಾವ ಕ್ರಮವನ್ನು ಸಹ ಕೈಗೊಂಡಿರುವುದಿಲ್ಲ ಎಂದು ತಿಳಿಸಿದರು.

7) ಶ್ರೀ ನಾಗರಾಜು ಸಿ ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಸರ್ಕಾರದ ಪದವಿ ಕಾಲೇಜುಗಳಲ್ಲಿಯೂ ಕೂಡ ಬೋಧಿಸುತ್ತಿರುವುದು ಗಮನಿಸಿರುತ್ತೇನೆ, ಇದನ್ನು ಜಂಟಿ ನಿರ್ದೇಶಕರು ಪರಿಶೀಲಿಸಿ ಪಟ್ಟಿ ಮಾಡಿ ಮಾನ್ಯ ಕುಲಪತಿಯವರು ಮತ್ತು ಕುಲಸಚಿವರಿಗೆ ಮಾಹಿತಿ ನೀಡಬೇಕು. ಎರಡನೇಯದಾಗಿ ಎರಡೂ ಕಡೆ ಪಾಠ ಮಾಡುವುದಕ್ಕೆ ಹೇಗೆ ಸಾಧ್ಯ ಎಂಬುದನ್ನು ಗಮನಿಸಿ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕ್ರಮ ಕೈಗೊಂಡರೆ ನ್ಯಾಯಾಲಯದ ಮೊರೆ ಹೋಗುತ್ತಾರೆಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ವಕೀಲರಿಗೆ ಈ ಸಂಬಂಧ ಅಗತ್ಯ ದಾಖಲೆಗಳನ್ನು ಒದಗಿಸಿ ಅತಿಥಿ ಉಪನ್ಯಾಸಕರು ಹೂಡುವ ದಾವೆಗಳನ್ನು ಇತ್ಯರ್ಥಪಡಿಸಲು ತುರ್ತು ಕ್ರಮವಹಿಸುವಂತೆ ತಿಳಿಸಿದರು.

ಡಾ. ನಟರಾಜು ಹೆಚ್.ಎಸ್‌ರವರು ಮಾತನಾಡಿ, ಕಳೆದ ಸಭೆಯಲ್ಲಿಯೇ ಜಂಟಿ ನಿರ್ದೇಶಕರಿಂದ ಮಾಹಿತಿ ಪಡೆದು ಕ್ರಮಕೈಗೊಳ್ಳುವುದಾಗಿ ತಿಳಿಸಿದ್ದರು ಆದರೆ ಅದು ಇಲ್ಲಿಯವರೆಗೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ ಎಂದು ತಿಳಿಸಿದರು.

ಜಂಟಿ ನಿರ್ದೇಶಕರು ಮಾತನಾಡಿ, ಎರಡು ಸರ್ಕಾರಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಬಾರದು ಎಂಬ ನಿಯಮ ಮಾತ್ರ ನಮ್ಮಲ್ಲಿ ಇರುವುದು, ಆದರೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಯಾವುದೇ ದಾಖಲೆಗಳನ್ನು ನೀಡುವುದಿಲ್ಲ, ಕೌನ್ಸಿಲಿಂಗ್ ಎಲ್ಲವನ್ನೂ ಕೂಡ ಮುಖ್ಯ ಕಛೇರಿಯಲ್ಲೇ ನಡೆಯುತ್ತದೆ, ಅತಿಥಿ ಉಪನ್ಯಾಸಕರು ಯಾವ ಕಾಲೇಜು ಆಯ್ಕೆ ಮಾಡಿಕೊಳ್ಳುತ್ತಾರೆ ಆ ಕಾಲೇಜಿನ ಪ್ರಾಂಶುಪಾಲರು ಅವರನ್ನು ವರದಿ ಮಾಡಿಸಿಕೊಳ್ಳುತ್ತಾರೆ, ಇದರ ಹೊರತು ಯಾವುದೇ ರೀತಿಯ ಮಾಹಿತಿಯು ನಮ್ಮ ಕಛೇರಿಯಲ್ಲಿ ಲಭ್ಯವಾಗುವುದಿಲ್ಲವೆಂದು ತಿಳಿಸಿದರು.

ಶ್ರೀ ನಾಗರಾಜು ಸಿರವರು ಮಾತನಾಡಿ, ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳ ಪಟ್ಟಿ ಇರುತ್ತದೆ ಮತ್ತು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರುಗಳ ಪಟ್ಟಿ ಇರುತ್ತದೆ ಎರಡನ್ನು ತಾಳೆ ಮಾಡಿ ಎರಡು ಕಡೆ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುವವರನ್ನು ವಜಾ ಮಾಡಬಹುದೆಂದು ತಿಳಿಸಿದರು.

8) ಶ್ರೀ ಮಹದೇಶುರವರು ಮಾತನಾಡಿ, ಹಣಕಾಸು ಅಧಿಕಾರಿಗಳಿಗೆ ಕಳೆದ ಒಂದುವರೆ ತಿಂಗಳ ಹಿಂದೆ ಸರ್ಕಾರವು ಪತ್ರ ಬರೆದಿದ್ದು ಸದರಿ ಪತ್ರದಲ್ಲಿ ತಿಳಿಸಿರುವಂತೆ ಹೆಚ್ಚುವರಿಯಾಗಿರುವ ತಾತ್ಕಾಲಿಕ

ಬೋಧಕೇತರ ಸಿಬ್ಬಂದಿಯವರನ್ನು ಬಿಡುಗಡೆಗೊಳಸುವುದಾದರೆ ಸರ್ಕಾರ ಪಿಂಚಣಿಗಾಗಿ ಅನುದಾನ ನೀಡುವುದಾಗಿ ತಿಳಿಸಿರುತ್ತಾರೆ. ಅನವಶ್ಯಕವಾಗಿರುವ 400 ರಿಂದ 500 ತಾತ್ಕಾಲಿಕ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆ ಮಾಡಿದರೆ ಸದರಿ ಉದ್ಯೋಗಿಗಳ ವಾರ್ಷಿಕ ವೇತನಕ್ಕಾಗಿ ಪಾವತಿ ಮಾಡುತ್ತಿರುವ ರೂ. 27.00 ರಿಂದ 28.00 ಕೋಟಿಗಳ ಹಣವನ್ನು ಉಳಿಸಬಹುದಾಗಿರುತ್ತದೆ ಈ ಸಂಬಂಧ ತಾವು ಯಾವ ಕ್ರಮವನ್ನು ವಹಿಸಿರುವಿರಿ ಎಂದು ಹಣಕಾಸು ಅಧಿಕಾರಿಗಳಲ್ಲಿ ಕೇಳಿದರು. ಹಣಕಾಸು ಅಧಿಕಾರಿಯವರು ಮಾತನಾಡಿ, ಸರ್ಕಾರದಿಂದ ಬಂದ ಪತ್ರಕ್ಕೆ ಕುಲಸಚಿವರು ಮಾಹಿತಿ ನೀಡಬೇಕಾಗಿರುತ್ತದೆ, ವಿಶ್ವವಿದ್ಯಾನಿಲಯದ ಹಣಕಾಸು ಸಂಬಂಧ ಎಲ್ಲಾ ಮಾಹಿತಿಯನ್ನು ಕುಲಸಚಿವರಿಗೆ ನೀಡಿರುತ್ತೇನೆ ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕೆಲವು ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳು ತಿಳಿಸಿರುವ ಹಾಗೆ ವೇತನ ಪರಿಷ್ಕೃತ ಸ್ಲಾಬ್‌ನ್ನು ಮಾನ್ಯ ಕುಲಪತಿಯವರು ರದ್ದುಪಡಿಸಿರುವುದಾಗಿ ತಿಳಿಸಿರುತ್ತಾರೆಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರದ ಹಣಕಾಸು ಇಲಾಖೆಯ ಉನ್ನತಾಧಿಕಾರಿಗಳ ನಿರ್ದೇಶನದಂತೆ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯ ವೇತನ ಪರಿಷ್ಕೃತ ಸ್ಲಾಬ್‌ನ್ನು ರದ್ದುಪಡಿಸಲಾಗಿದೆಯೆಂದು ಸಭೆ ಗಮನಕ್ಕೆ ತಂದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧಿಕ ಸಿಬ್ಬಂದಿಗಳ ಪರಿಣಾಮ ಹೆಚ್ಚಿನ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆಯೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅಧಿಕ ತಾತ್ಕಾಲಿಕ ಬೋಧಕೇತರ ಸಿಬ್ಬಂದಿ ಮತ್ತು ಖಾಯಂ ಸಿಬ್ಬಂದಿಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇರುವುದನ್ನು ಗಮನಿಸಿರುತ್ತೇನೆ, ಖಾಯಂ ಸಿಬ್ಬಂದಿಗಳು ಉನ್ನತ ಶ್ರೇಣಿಯಲ್ಲಿರುವವರು ವಿಶ್ವವಿದ್ಯಾನಿಲಯದಲ್ಲಿಯೇ ಇರುವ ಮಾಹಿತಿ ನೀಡುವಲ್ಲಿ ವಿಫಲರಾಗಿರುತ್ತಾರೆ. ಅನುಕಂಪದ ಆಧಾರದ ಮೇಲೆ ನೇಮಕಾತಿಯಾಗಿರುವವರ ಮಾಹಿತಿ ನೀಡುವಂತೆ ತಿಳಿಸಿದ್ದರೂ ಕೂಡ ಇಲ್ಲಿಯವರೆಗೂ ಅದರ ಮಾಹಿತಿ ನೀಡಿರುವುದಿಲ್ಲ ಇಂತಹ ಖಾಯಂ ಸಿಬ್ಬಂದಿಗಳಿಂದ ಮಾಹಿತಿ ಪಡೆಯುವುದು ಕಷ್ಟಕರವಾಗುತ್ತಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮಾಹಿತಿ ನೀಡುವಲ್ಲಿ ವಿಫಲರಾದವರನ್ನು ಗುರುತಿಸಿ, ಅಂತಹ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸುವಂತೆ ಸೂಚಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಕುಲಸಚಿವರು ಕಳೆದ ಎರಡು ಮೂರು ತಿಂಗಳಿಂದ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಟೆಂಡರ್‌ಗಳ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು ಕೂಡ ತಾತ್ಕಾಲಿಕ ಎಸ್‌ಡಿಎ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ಯಾರು ಸಹ ಇಲ್ಲಿಯವರೆಗೂ ಮಾಹಿತಿ ನೀಡಿರುವುದಿಲ್ಲ ಅಂತಹವರ ವಿರುದ್ಧ ಮಾನ್ಯ ಕುಲಪತಿಗಳು ಶಿಸ್ತು ಕ್ರಮಕೈಗೊಳ್ಳಬೇಕು ಇಲ್ಲವಾದರೆ ವಿಶ್ವವಿದ್ಯಾನಿಲಯ ಖಾಸಗಿಯವರ ಸ್ವತ್ತಾಗುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಸಿಬ್ಬಂದಿಗಳು ಕಾರ್ಯನಿರ್ವಹಿಸದಿರುವುದು ಕಂಡುಬಂದರೆ ಕೂಡಲೇ ಶಿಸ್ತುಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ವಿಶ್ವವಿದ್ಯಾನಿಲಯದ ವೈದ್ಯರ ನೇಮಕದ ಕುರಿತು ಸರ್ಕಾರ ಮೂರು ದಾಖಲೆಗಳನ್ನು ಕೇಳಿರುತ್ತದೆ ಅದನ್ನು ಪ್ರಸ್ತುತಪಡಿಸುವುದಕ್ಕೆ ಆಡಳಿತ ಶಾಖೆ ವಿಫಲರಾಗಿರುವುದಾಗಿ ತಿಳಿಸಿದರು, ವಿಶ್ವವಿದ್ಯಾನಿಲಯ ಒಬ್ಬರು ಪ್ರಾಧ್ಯಾಪಕರನ್ನು ವರ್ಗಾವಣೆ

ಮಾಡಿರುವುದರ ಬಗ್ಗೆ ಸರ್ಕಾರದಿಂದ ಯಾವ ಮಾನದಂಡದ ಆಧಾರದ ಮೇಲೆ ವರ್ಗಾವಣೆ ಮಾಡಲಾಗಿದೆ ಎಂಬ ಮಾಹಿತಿ ಕೇಳಲಾಗಿದೆ ಅದನ್ನು ಸಹ ಆಡಳಿತ ಶಾಖೆ ಮಾಹಿತಿ ನೀಡುವಲ್ಲಿ ವಿಫಲರಾಗಿರುತ್ತಾರೆ, ಸಿಬ್ಬಂದಿಗಳು ಮಾನ್ಯ ಕುಲಪತಿಗಳ ಬೆನ್ನೆಲುಬು ರೀತಿಯಲ್ಲಿ ಕೆಲಸ ನಿರ್ವಹಿಸಬೇಕಾಗುತ್ತದೆ.

ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ಹಣಕಾಸು ಅಧಿಕಾರಿಗಳು ನಾವು ಕೇಳುವ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲವೆಂದು ತಿಳಿಸಿದರು. ಕುಲಸಚಿವರಿಂದ ಆದೇಶವಾದರೂ ಸಹ ಹಣಕಾಸು ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳನ್ನು ಅತ್ಯಧಿಕವಾಗಿ ನೇಮಕ ಮಾಡಿಕೊಂಡಿರುತ್ತಾರೆಂದರು. ಸದರಿ ಅವಧಿಯಲ್ಲಿ ನೇಮಕಗೊಂಡ ಉದ್ಯೋಗಿಗಳ ನೇಮಕಾತಿಯು ನಿಯಮಬಾಹಿರವಾಗಿರುತ್ತದೆಯೆಂದು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಅಧಿಕವಾಗಿರುವ ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸುವುದು ಸೂಕ್ತವೆಂದು ಸಲಹೆ ನೀಡಿದರು.

ಮುಂದುವರೆದು, ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿಯು ಕೇವಲ ತಾತ್ಕಾಲಿಕ ಎಂದು ಹಾಗೂ ಯಾವುದೇ ಸಂದರ್ಭದಲ್ಲಿಯಾದರೂ ಸಹ ನೇಮಕಾತಿ ಆದೇಶವನ್ನು ಹಿಂಪಡೆಯಲಾಗುವುದೆಂದು ಸದರಿಯವರುಗಳ ಆದೇಶದಲ್ಲಿಯೇ ನಮೂದಿಸಲಾಗಿರುತ್ತದೆಯೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಬೋಧಕೇತರರನ್ನು ಬಿಡುಗಡೆಗೊಳಿಸಲಾಗಿದೆಯೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಪದ್ಧತಿ ಇರುವುದರಿಂದ ತಾತ್ಕಾಲಿಕ ಬೋಧಕೇತರರನ್ನು ಬಿಡುಗಡೆಗೊಳಿಸುವುದು ಸುಲಭವಾಯಿತು. ಆದರೆ ಮೈಸೂರು ವಿಶ್ವವಿದ್ಯಾನಿಲಯಲ್ಲಿ ಹಿಂದೆ ಹೊರಗುತ್ತಿಗೆ ಪದ್ಧತಿಯಿದ್ದು ಅದನ್ನು ಸಂಚಿತ ವೇತನವೆಂದು ಪರಿವರ್ತಿಸಿರುವುದರಿಂದ ಕ್ರಮಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸರ್ಕಾರದಿಂದ ತಾತ್ಕಾಲಿಕ ನೌಕರರನ್ನು ತರ್ಕಬದ್ಧ ಮಾಡುವಂತೆ ಮೂರು-ನಾಲ್ಕು ಬಾರಿ ಪತ್ರ ಬಂದಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರ ತಾತ್ಕಾಲಿಕ ನೌಕರರನ್ನು ತರ್ಕಬದ್ಧ ಮಾಡುವಂತೆ ತಿಳಿಸಿದೆ ಆದರೆ ತರ್ಕಬದ್ಧಗೊಳಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದರು.

ಕುಲಸಚಿವರು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ತಾತ್ಕಾಲಿಕ ಬೋಧಕೇತರರನ್ನು ತರ್ಕಬದ್ಧಗೊಳಿಸಲು ಸಾಧ್ಯವಾಗುವುದಿಲ್ಲ, ಹಿಂದಿನ ಕುಲಪತಿಯವರು ತಾತ್ಕಾಲಿಕ ಬೋಧಕೇತರರನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ, ಹೀಗೆ ವಿಶ್ವವಿದ್ಯಾನಿಲಯದಲ್ಲಿ 2013ರಿಂದ ತಾತ್ಕಾಲಿಕ ಬೋಧಕೇತರರ ನೇಮಕಾತಿ ಹೆಚ್ಚುತ್ತಲೇ ಇದೆ, ಪ್ರಸ್ತುತ ಹೆಚ್ಚುವರಿಯಾಗಿರುವ ತಾತ್ಕಾಲಿಕ ಬೋಧಕೇತರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಬೇಕು ಎಂದರೆ, ಹೆಚ್ಚುವರಿಯಾಗಿ ತಾತ್ಕಾಲಿಕ ಬೋಧಕೇತರರ ನೇಮಕಾತಿ ಯಾರ ಅವಧಿಯಲ್ಲಾಗಿದೆ, ಮುಂದೆ ತಾತ್ಕಾಲಿಕ ಬೋಧಕೇತರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿದರೆ ಯಾವ ಸನ್ನಿವೇಶ ಎದುರಿಸಬೇಕಾಗುತ್ತದೆ ಇದಕ್ಕೆಲ್ಲಾ ಸರ್ಕಾರ ಅನುಮತಿ ನೀಡಿದರೆ ಕ್ರಮಕೈಗೊಳ್ಳಬಹುದು ಎಂದು ತಿಳಿಸಿದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ನಾವು ಗಮನಿಸಿದ ಹಾಗೆ 2017 ರಿಂದ 2022ರವರೆಗೆ ಹೆಚ್ಚುವರಿಯಾಗಿ ತಾತ್ಕಾಲಿಕ ಬೋಧಕೇತರರ ನೇಮಕಾತಿ ನಡೆದಿದೆ. ಪಿಂಚಣಿದಾರರು

ಕೂಡ ತಾತ್ಕಾಲಿಕ ಬೋಧಕೇತರರನ್ನು ಸರ್ಕಾರ ತಿಳಿಸಿದಂತೆ ತರ್ಕಬದ್ಧಗೊಳಿಸಿದರೆ ಪಿಂಚಣಿಗೆ ತೊಂದರೆ ಇಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸರ್ಕಾರ ತರ್ಕಬದ್ಧಗೊಳಿಸುವಂತೆ ನಿರ್ದೇಶಿಸಿರುವುದರಿಂದ ಈ ಕುರಿತು ಕ್ರಮಕೈಗೊಳ್ಳ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ತಾತ್ಕಾಲಿಕ ಬೋಧಕೇತರರನ್ನು ತರ್ಕಬದ್ಧ ಮಾಡುವುದರಿಂದಲೂ ಸಹ ಪಿಂಚಣಿದಾರರಿಗೆ ಪಿಂಚಣಿ ನೀಡಲು ಅನುದಾನ ಸಾಕಾಗುವುದಿಲ್ಲವೆಂದರು.

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ತಾತ್ಕಾಲಿಕ ಬೋಧಕೇತರರನ್ನು ತರ್ಕಬದ್ಧಗೊಳಿಸುವ ಬಗ್ಗೆ ಒಂದು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಹಣಕಾಸು ಅಧಿಕಾರಿಯವರಿಗೆ ತಿಳಿಸಿದರು.

ಕುಲಸಚಿವರು ಮಾತನಾಡಿ, ತಾತ್ಕಾಲಿಕ ಬೋಧಕೇತರರನ್ನು ತರ್ಕಬದ್ಧಗೊಳಿಸುವುದಕ್ಕೆ ತೊಂದರೆಯಾಗುತ್ತಿದೆ. ಖಾಲಿ ಹುದ್ದೆಗೆ ಅನುಗುಣವಾಗಿ ನೇಮಕಾತಿ ಮಾಡುವುದಕ್ಕೆ ಹೋದರೆ ಸುಮಾರು ಸಾವಿರ ತಾತ್ಕಾಲಿಕ ಬೋಧಕೇತರರು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ತರ್ಕಬದ್ಧಗೊಳಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮಾನಸಗಂಗೋತ್ರಿಯಲ್ಲಿ ಕೆಲವೊಂದು ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ತಾತ್ಕಾಲಿಕ ಬೋಧಕೇತರರೇ ಇರುವುದು ಕಂಡುಬಂದಿದೆಯೆಂದರು.

ಡಾ. ಎಂ. ಪುಷ್ಪವತಿರವರು ಮಾತನಾಡಿ, ಒಂದು ಸಮಿತಿ ರಚಿಸಿ ಅಲ್ಲಿ ಎಲ್ಲಾ ವಿಭಾಗದ ಅಧ್ಯಕ್ಷರುಗಳನ್ನು ಕರೆಸಿ ವಿಭಾಗದಲ್ಲಿ ಎಷ್ಟು ಬೋಧಕೇತರರು ಕಾರ್ಯನಿರ್ವಹಿಸುತಿದ್ದಾರೆ ಎಂಬುದರ ಮಾಹಿತಿ ಪಡೆದುಕೊಂಡರೆ ಹೆಚ್ಚುವರಿಯಾಗಿರುವ ತಾತ್ಕಾಲಿಕ ಬೋಧಕೇತರ ಸಂಖ್ಯೆಯನ್ನು ಪತ್ತೆ ಹಚ್ಚಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾದ ವಿಷಯವನ್ನು ನೇರವಾಗಿ ಪತ್ರಿಕೆಗಳಿಗೆ ಸಿಂಡಿಕೇಟ್ ಸದಸ್ಯರು ನೀಡುವ ಪದ್ಧತಿಯನ್ನು ಬೆಳೆಸಿಕೊಳ್ಳಬಾರದು ಎಂದು ತಿಳಿಸಿದರು.

10. ಶ್ರೀ ಮಹದೇಶುರವರು ಮಾತನಾಡಿ ವಿದ್ಯಾರ್ಥಿನಿಲಯಗಳಲ್ಲಿ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವಂತೆ ಕೋರಿದರು. ಈ ಸಂಬಂಧ ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ತಿಳಿಸಿದರು.

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಗೌರವಾನ್ವಿತ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಹಾಗೂ ಅಧ್ಯಕ್ಷರು